ಕರ್ನಾಟಕ ಸರ್ಕಾರ

ಜಿಲ್ಲಾ ಆಡಳಿತ ಧಾರವಾಡ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಧಾರವಾಡ

# ಕನ್ನಡ ದೀವಿಗೆ

## ಎಸ್.ಎಸ್.ಎಲ್.ಸಿ

## ವಿದ್ಯಾರ್ಥಿಗಳ ಉತ್ತೀರ್ಣತಾ ಕಂತೆ

# ಪ್ರಥಮ ಭಾಷೆ ಕನ್ನಡ

| | |
|---|---|
| **ಕಲ್ಪನೆ** | ಶ್ರೀಮತಿ. ದಿವ್ಯಪ್ರಭು.ಜಿ.ಆರ್.ಜೆ. ಮಾನ್ಯ ಜಿಲ್ಲಾಧಿಕಾರಿಗಳು ಧಾರವಾಡ |
| **ಮಾರ್ಗದರ್ಶನ** | ಶ್ರೀ. ಎಸ್. ಎಸ್. ಕೆಳದಿಮಠ ಉಪನಿರ್ದೇಶಕರು (ಆಡಳಿತ) ಶಾ.ಶಿ.ಇಲಾಖೆ ಧಾರವಾಡ |
| **ಸಲಹೆಗಾರರು** | ಶ್ರೀ. ಉಮೇಶ.ವೈ. ಬಮ್ಮಕ್ಕನವರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುಬ್ಬಳ್ಳಿ ಗ್ರಾಮೀಣ |
| **ಪ್ರೋತ್ಸಾಹ** | ಶ್ರೀಮತಿ. ಡಾ|| ರೇಣುಕಾ ಅಮಲ್ಝರಿ ಸ.ಯೋ.ಸಂ.ಅ. ಶಾ.ಶಿ.ಇ. ಧಾರವಾಡ |
| | ಶ್ರೀಮತಿ. ರೇಣುಕಾ ಇಂಗಳಕಿ ಕನ್ನಡ ವಿಷಯ ಪರಿವೀಕ್ಷಕರು ಶಾ.ಶಿ.ಇ. ಧಾರವಾಡ |

## ಸಂಪನ್ಮೂಲ ರಚನಾ ತಂಡ

| | |
|---|---|
| ಶ್ರೀ. ರವಿ ವಿ ಕುಲಕರ್ಣಿ | ಸರ್ಕಾರಿ ಪ್ರೌಢಶಾಲೆ ಕುರುವಿನಕೊಪ್ಪ |
| ಶ್ರೀ. ಯುವರಾಜ ಜಾಧವ | ಸರ್ಕಾರಿ ಪ್ರೌಢಶಾಲೆ ಕಮಡೊಳ್ಳಿ |
| ಶ್ರೀ. ವೆಂಕಟೇಶ ಲಕ್ಷಾಣಿ | ಎನ್.ಇ.ಎಸ್. ಅಳ್ನಾವರ |

# ಪರಿವಿಡಿ

| ಅ. ಸಂ | ಪರಿಕಲ್ಪನೆಗಳು | ಪುಟ ಸಂಖ್ಯೆ | ನಿರೀಕ್ಷಿತ ಅಂಕಗಳು |
|---|---|---|---|
| 01 | ವರ್ಣಮಾಲೆ ಮತ್ತು ಗ್ರಾಂಥಿಕ ರೂಪಗಳು | 3 | 2 |
| 02 | ತತ್ಸಮ-ತದ್ಭವಗಳು | 4 | 1 |
| 03 | ದ್ವಿರುಕ್ತಿ, ಅನುಕರಣಾವ್ಯಯ, ಜೋಡುನುಡಿ | 5 | 1 |
| 06 | ಅನ್ಯದೇಶೀಯ ಪದಗಳು & ವಿಭಕ್ತಿಗಳು | 6 | 1 |
| 06 | ಸಂಧಿಗಳು ಮತ್ತು  ಸಮಾಸಗಳು | 7 | 2 |
| 06 | ಕಂಠಪಾಠದ ಪದ್ಯಗಳು | 8 | 4 |
| 07 | ಒಂದೊಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು | 9 - 14 | 7 |
| 08 | ಲೇಖಕರ/ಕವಿ ಪರಿಚಯ. | 15 - 18 | 6 |
| 09 | ಛಂಧಸ್ಸು | 19 | 3 |
| 10 | ಅಲಂಕಾರಗಳು | 20 – 22 | 3 |
| 11 | ಮೂರು- ನಾಲ್ಕು ವಾಕ್ಯದ ಪ್ರಶ್ನೋತ್ತರಗಳು | 22 – 26 | 10 |
| 12 | ಸಂದರ್ಭ ಸಹಿತ ಸ್ವಾರಸ್ಯ | 27 – 32 | 6 |
| 13 | ಗಾದೆ ಮಾತು ವಿಸ್ತರಣೆ | 32 | 2 |
| 14 | ಅಪಠಿತ ಗದ್ಯ | 33 - 34 | 4 |
| 15 | ಪತ್ರಲೇಖನ | 35 – 37 | 4 |
| 16 | ಪ್ರಬಂಧ ರಚನೆ | 38 - 39 | 4 |
| | | ಒಟ್ಟು ಅಂಕಗಳು | 60 |

**ಬಹು ಆಯ್ಕೆಯ ಪ್ರಶ್ನೆಗಳು - 06**
**ಪತ್ರಲೇಖನ - 04**
**ಕವಿ ಪರಿಚಯ - 06**
**ಛಂದಸು - 03**
**ಸಂದರ್ಭಗಳು - 06**
**ಪ್ರಬಂಧ ರಚನೆ - 04**

**ಒಂದು ಅಂಕದ ಪ್ರಶ್ನೆಗಳು - 07**
**ಮೂರು ನಾಲ್ಕು ವಾಕ್ಯದ ಪ್ರಶ್ನೆಗಳು - 10**
**ಅಪಠಿತ ಗದ್ಯ - 04**
**ಅಲಂಕಾರ - 03**
**ಗಾದೆ ಮಾತು ವಿಸ್ತರಣೆ - 02**
**ಕಂಠಪಾಠದ ಪದ್ಯ - 04**

# ವರ್ಣಮಾಲೆ

- ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳು:   49  ( ಅ ದಿಂದ ಳ್ ದ ವರೆಗೆ )
- ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಸ್ವರಗಳು : 13 ( ಅ,ಆ,ಇ,ಈ,ಉ,ಊ,ಋ,ಎ,ಏ,ಐ,ಒ,ಓ,ಔ,)
- ಕನ್ನಡ ವರ್ಣಮಾಲೆಯಲ್ಲಿರುವ ಹೃಸ್ವಸ್ವರಗಳು : 06 (ಅ, ಇ, ಉ, ಋ, ಎ. ಒ)
- ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳು : 07  ( ಆ, ಈ,ಊ, ಏ, ಐ, ಓ, ಔ)
- ಔಕನ್ನಡ ವರ್ಣಮಾಲೆಯಲ್ಲಿರುವ ಸಂಧ್ಯಕ್ಷರಗಳು : 02  ( ಐ, ಔ )
- ಕನ್ನಡ ವರ್ಣಮಾಲೆಯಲ್ಲಿರುವ ಯೋಗವಾಹಗಳು : 02   ( ಅನುಸ್ವಾರ-೦  , ವಿಸರ್ಗ-ಃ )
- ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಗಳು : 34 ( ಕ್ ದಿಂದ ಳ್ ದ ವರೆಗೆ )
- ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವರ್ಗೀಯ ವ್ಯಂಜನಗಳು : 25 ( ಕ್ ದಿಂದ ಮ್ ದವರೆಗೆ )
- ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಾಕ್ಷರಗಳು : 10 ( ಕ್,ಚ್, ಟ್, ತ್, ಪ್, ಗ, ಜ್,ಡ್,ದ್,ಬ್ )
- 
- ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳು : 10 ( ಖ್, ಛ್,ಠ್, ಥ್, ಫ್, ಘ್, ಝ್, ಢ್, ಧ್, ಭ್ )
- ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಗಳು  : 05 ( ಙ್, ಞ್, ಣ್, ನ್, ಮ್ )
- ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅವರ್ಗೀಯ ವ್ಯಂಜನಗಳು :09 ( ಯ್, ರ್, ಲ್,ವ್, ಶ್,ಷ್, ಸ್, ಹ್, ಳ್ )

## ಗ್ರಾಂಥಿಕ ರೂಪಗಳು

| | |
|---|---|
| ಹೀಂಗ –  ಹೀಗೆ | ಮ್ಯಾಗ  –     ಮೇಲೆ |
| ಕಳುವ್ಯಾರೆ –  ಕಳುಹಿಸಿದ್ದಾರೆ | ಇಲ್ಲದ್ದಂಗ  –   ಇಲ್ಲದಹಾಗೆ |
| ಇಸವಾಸ  – ವಿಶ್ವಾಸ | ಸಕ್ಕಾರಿ   –    ಸಕ್ಕರೆ |

# ತತ್ಸಮ-ತದ್ಭವಗಳು

| | | |
|---|---|---|
| ಗ್ರಹ - ಗರ | ವಂಧ್ಯಾ - ಬಂಜೆ | ಅರ್ಕ - ಎಕ್ಕ |
| ಕಾವ್ಯ - ಕಬ್ಬ | ದೃಷ್ಟಿ - ದಿಟ್ಟಿ | ವಂಶ - ಬಂಚ |
| ಕುಠಾರ - ಕೊಡಲಿ | ಪಾದುಕಾ - ಹಾವುಗೆ | ಕಾರ್ಯ - ಕಜ್ಜ |
| ತಪಸ್ವಿ - ತವಸಿ | ಸಂಧ್ಯಾ - ಸಂಜೆ | ಸಂದೇಹ - ಸಂದೇಯ |
| ಯಶ - ಜಸ | ಪಟ್ಟಣ - ಪತ್ತಣ | ಯುಗ - ಜುಗ |
| ವ್ಯಾಪಾರಿ - ಬೇಹಾರಿ | ಕೋಕಿಲ - ಕೋಗಿಲೆ | ಯುದ್ಧ - ಜುದ್ಧ |
| ವರ್ಣ - ಬಣ್ಣ | ಬ್ರಹ್ಮ - ಬೊಮ್ಮ | ಅಟವಿ - ಅಡವಿ |
| ಪ್ರಸಾದ - ಹಸಾದ | ಧಾತೃ - ದಾತಾರ | ರಾಯ - ರಾಜ |
| ವೀರ - ಬೀರ | ಯಜ್ಞ – ಜನ್ನ | ದಿಶಾ - ದೆಸೆ |
| ವಿಜ್ಞಾಪನೆ - ಬಿನ್ನಹ | ಸುಧೆ - ಸೊದೆ | ಪುಣ್ಯ - ಹೂನ್ಯ |
| ಕವಿ - ಕಬ್ಬಿಗ | ತಟ - ತಡಿ | ಚಂದ್ರ - ಚಂದಿರ |
| ಮುಖಶಾಲೆ - ಮೊಗಸಾಲೆ | ಅಮೃತ - ಅಮರ್ದು | ವರ್ಷ - ವರುಷ |
| ದೀಪಿಕಾ - ದೀವಿಗೆ | ಧರ್ಮ - ದಮ್ಮ | ವೈಶಾಖ - ಬೇಸಗೆ |
| ಶಶಿ - ಸಸಿ | ಶ್ರೀ - ಸಿರಿ | ಸ್ಥಿರ - ಚಿರ |
| ಕಲಶ - ಕಳಸ | ಅಂಕುಶ - ಅಂಕುಸ | ಸ್ಥಾನ - ತಾಣ |
| ಅಂಗಳ - ಅಂಕಣ | ಆರ್ಯ - ಅಜ್ಜ | ದ್ಯೂತ - ಜೂಜು |
| ವಿದ್ಯಾಧರ - ಬಿಜ್ಜೋದರ | ಶಿರ - ಸಿರ | ಶಾಲಾ - ಶಾಲೆ |

## ದ್ವಿರುಕ್ತಿ / ಅನುಕರಣಾವ್ಯಯ / ಜೋಡುನುಡಿ

- ಒಂದು ಪದವನ್ನು ಅನವಶ್ಯಕವಾಗಿ ಎರಡೆರಡು ಬಾರಿ ಹೇಳುವುದಕ್ಕೆ **ದ್ವಿರುಕ್ತಿ** ಎಂದು ಕರೆಯುತ್ತೇವೆ.
- ಅರ್ಥವಿಲ್ಲದ ಧ್ವನಿವಿಶೇಷಗಳನ್ನು **ಅನುಕರಣಾವ್ಯಗಳು** ಎಂದು ಕರೆಯುತ್ತೇವೆ.
- ಎರಡು ಬೇರೆ ಬೇರೆ ಪದಗಳು ಜೊತೆ ಜೊತೆಯಾಗಿ ಬಳಕೆಯಾಗುವುದಕ್ಕೆ **ಜೋಡುನುಡಿ**ಗಳೆಂದು ಕರೆಯುತ್ತೇವೆ.

| ದ್ವಿರುಕ್ತಿಗಳು | ಅನುಕರಣಾವ್ಯಯಗಳು | ಜೋಡುನುಡಿಗಳು |
|---|---|---|
| ಹೌದುಹೌದು | ಸರಸರ | ನೋವು-ನಲಿವು |
| ಹೆಚ್ಚುಹೆಚ್ಚು | ಪರಪರ | ಕಷ್ಟ-ಕಾರ್ಪಣ್ಯ |
| ನಡೆನಡೆ | ಝುಳಝುಳ | ತೀರ್ಥ-ಪ್ರಸಾದ |
| ಅಗೋಅಗೋ | ಜುಳುಜುಳು | ನೀರು-ನಿಡಿ |
| ಬನ್ನಿ ಬನ್ನಿ | ಚುರುಚುರು | ಮನೆ-ಮಠ |
| ದೊಡ್ಡದೊಡ್ಡ | ರಪರಪ | ಹಾದಿ-ಬೀದಿ |
| ಮನೆಮನೆ | ಝಣಝಣ | ದಿನ್ನಿ-ದಿಬ್ಬ |
| ಕೇರಿಕೇರಿ | ರೊಯ್ಯನೆ | ಸತಿಪತಿ |
| ಅಬ್ಬಬ್ಬಾ | ಸುಯ್ಯನೆ | ಕೆನೆಮೊಸರು |
| ಒಡುಓಡು | ಕರಕರ | ಹಾಲುಜೇನು |
| ಈಗೀಗ | ಧಗಧಗ | ಮಕ್ಕಳುಮರಿ |
| ಸಾಕುಸಾಕು | ಘಮಘಮ | ಹುಳಹುಪ್ಪಡಿ |
| ಮೊತ್ತಮೊದಲು | ದಡದಡ | ಬಟ್ಟೆಬರೆ |
| ನಟ್ಟನಡುವೆ | ಪಟಪಟ | ಸೊಪ್ಪುಸದೆ |
| ತುತ್ತತುದಿ | ಫಳಫಳ | ಮಂಡಲಗಿಂಡಲ |
| ಕಟ್ಟಕಡೆಗೆ | ಚಟಚಟ | ಕೆನೆಮೊಸರು |
| ನಿಲ್ಲುನಿಲ್ಲು | ಘುಳುಘುಳು | |
| ಅಹಹಾ | ಚರಚರ | |
| ಬಂದೆಬಂದೆ | | |
| ಮೆಲ್ಲಮೆಲ್ಲನೆ | | |
| ಕೊನೆಕೊನೆಗೆ | | |
| ಆಗಲಿ ಆಗಲಿ | | |
| ಇರಲಿ ಇರಲಿ | | |
| ಹೌದ್ಹೌದು | | |

# ಅನ್ಯದೇಶಿಯ ಪದಗಳು

| ಗ್ರೀಕ್&ರೋಮನ್ | ಪರ್ಶಿಯನ್ | ಅರಬ್ಬಿ | ಪೋರ್ಚುಗೀಸ್ | ಉರ್ದು | ಹಿಂದೂಸ್ಥಾನಿ | ಇಂಗ್ಲೀಷ |
|---|---|---|---|---|---|---|
| ದಮ್ಮಡಿ | ಅಬಕಾರಿ | ಅಮಾನತ್ತು | ಮೇಜು | ಕಿಮ್ಮತ್ತು | ಅರ್ಜಿ | ಬಸ್ಸು |
| ದಮಡಿ | ರಸ್ತೆ | ಅಸಲು | ತಂಬಾಕು | ತಾರೀಖು | ಕಛೇರಿ | ಕಾರು |
| ದಮ್ಮ | ದವಾಖಾನೆ | ಇನಾಮು | ಅನಾನಸ್ಸು | ತಾಲೂಕು | ಕಾರ್ಖಾನೆ | ಕಾಲೇಜು |
| ದಿನಾರ್ | ಚೌಕಾಸಿ | ಕಾಯ್ದೆ | ಸಾಬೂನು | ಅಹವಾಲು | ಸಲಾಮು | ನೈಟು |
| ಗದ್ಯಾಣ | ಜಮೀನು | ಗಲೀಜು | ಆಸ್ಪತ್ರೆ | ಇಲಾಖೆ | ದರ್ಬಾರು | ಪೆನ್ನು |
| | ಅಜಮಾಯಿಸಿ | ತಕರಾರು | ಚೊಂಬು | ದರ್ಜೆ | ಕುರ್ಚಿ | ಸ್ಯಾನಿಟರಿ |
| | ಆಮದು | ತರಬೇತು | ಚಾ | ಬಂದೂಕು | ಕಾಗದ | ಸೋಪು |
| | ದಲ್ಲಾಳಿ | ನಕಲಿ | ಇಸ್ತ್ರೀ | ರುಜು | ಹುಕುಂ | ಡಿಪ್ಲೋ |
| | ಮಸಲತ್ತು | | ರಸೀದಿ | ಶುರು | | ಮಾ |
| | ದಿವಾನ | | | ಶಾಮೀಲು | | ಬ್ಲಾಕ್ ಔಟ |
| | ಸರಕಾರ | | | ಜುಲ್ಮಾನೆ | | ಡಾಕ್ಟರ್ |
| | | | | ದಾಖಲೆ | | ರಿಜೆಂಟ್ |

## ವಿಭಕ್ತಿ ಪ್ರತ್ಯಯಗಳು ಮತ್ತು ಕಾರಕಾರ್ಥಗಳು

| ವಿಭಕ್ತಿ | ಕಾರಕಾರ್ಥ | ಹೊಸಗನ್ನಡ ಪ್ರತ್ಯಯ | ರೂಪ | ಹಳಗನ್ನಡ ಪ್ರತ್ಯಯ | ರೂಪ |
|---|---|---|---|---|---|
| **ಪ್ರಥಮಾ** | ಕರ್ತ್ರಾರ್ಥ | ಉ | ಸಾವಿತ್ರಿಯು | ಮ್ | ಸಾವಿತ್ರಿಯುಮ್ |
| **ದ್ವಿತೀಯಾ** | ಕರ್ಮಾರ್ಥ | ಅನ್ನು | ಸಾವಿತ್ರಿಯನ್ನು | ಅಂ | ಸಾವಿತ್ರಿಯಂ |
| **ತೃತೀಯಾ** | ಕರಣಾರ್ಥ | ಇಂದ | ಸಾವಿತ್ರಿಯಿಂದ | ಇಂ,ಇಂದಂ,ಇಂದೆ | ಸಾವಿತ್ರಿಯಿಂ |
| **ಚತುರ್ಥಿ** | ಸಂಪ್ರದಾನ | ಗೆ, ಇಗೆ, ಕ್ಕೆ | ಸಾವಿತ್ರಿಗೆ | ಗೆ, ಇಗೆ, ಕ್ಕೆ | ಸಾವಿತ್ರಿಂಗೆ |
| **ಪಂಚಮೀ** | ಅಪಾದಾನ | ದೆಸೆಯಿಂದ | ಸಾವಿತ್ರಿದೆಸೆಯಿಂದ | ಅತ್ತಣಿಂ | ಸಾವಿತ್ರಿಯತ್ತಣಿಂ |
| **ಷಷ್ಠೀ** | ಸಂಬಂಧ | ಅ | ಸಾವಿತ್ರಿಯ | ಅ | ಸಾವಿತ್ರಿಯ |
| **ಸಪ್ತಮೀ** | ಅಧಿಕರಣ | ಅಲ್ಲಿ | ಸಾವಿತ್ರಿಯಲ್ಲಿ | ಒಳ್ | ಸಾವಿತ್ರಿಯೊಳ್ |

# ಸಂಧಿಗಳು

| **ಲೋಪಸಂಧಿ** | **ಆಗಮ ಸಂಧಿ** | **ಆದೇಶ ಸಂಧಿ** | **ಸವರ್ಣದೀರ್ಘ ಸಂಧಿ** | **ಗುಣಸಂಧಿ** | **ವೃದ್ಧಿ ಸಂಧಿ** | **ಯಣ್ ಸಂಧಿ** | **ಜಸ್ತ್ವ ಸಂಧಿ** | **ಶ್ಚುತ್ವ ಸಂಧಿ** | **ಅನುನಾಸಿಕ ಸಂಧಿ** |
|---|---|---|---|---|---|---|---|---|---|
| ಊರೂರು<br>ಬಲ್ಲೆನೆಂದು<br>ಮಾತಂತು<br>ಸಂಪನ್ನರಾದ<br>ಇರುಳಳಿದು<br>ತೆರೆದಿಕ್ಕುವ<br>ತಿಂಗಳಿನೂರು<br>ನಿಮ್ಮಡಿಗಳಲಿ<br>ನೋಡಿದರೆಲ್ಲರು<br>ಚರಿಸುತದ್ವರದ<br>ಲೇಖನವ<br>ನೋದಿ<br>ತೆಗೆದುತ್ತರೀ<br>ಯಮಂ<br>ಬೇಡಬೇಡರ<br>ಸುಗಳ<br>ನಿಂತಿರ್ದನು<br>ನಿಮ್ಮರಸ<br>ಕಳ್ಗುಡಿ<br>ಒಮ್ಮೊಮ್ಮೆ | ಕೈಯನ್ನು<br>ಮಳೆಯಿಂದ<br>ಶಾಲೆಯಲ್ಲಿ<br>ಮರವನ್ನು<br>ಮಗುವಿಗೆ<br>ವೇದಿಯಲ್ಲಿ<br>ಬೇಧವಿಲ್ಲ<br>ಬುದ್ಧಿಯೊಡೆಯ<br>ಜಾಗವನ್ನು<br>ಓಣಿಯಲ್ಲಿ | ಮಳೆಗಾಳ<br>ಮೈದೋರು<br>ಬೆಂಬತ್ತು<br>ಕಡುವೆಳ್ಪು<br>ಮೆಲ್ವಾತು<br>ಹೊಸಗಾಲ | ಮಹಾತ್ಮ<br>ಗಿರೀಶ<br>ಸುರಾಸುರ<br>ವಧೂಪೇತ<br>ನಿಜಾಶ್ರಮ<br>ವಲ್ಕಲಾವೃತ<br>ದ್ರವ್ಯಾರ್ಥಿ<br>ವಾಚನಾಲಯ<br>ಸಂಗ್ರಹಾಲಯ | ದೇವೇಂದ್ರ<br>ಜ್ಞಾನೇಶ್ವರ<br>ಸೂರ್ಯೋದ<br>ಯ<br>ಮಹರ್ಷಿ<br>ಮಹೇಶ<br>ಮದೋನ್ಮತ್ತ | ಏಕೈಕ<br>ಜನೈಕ್ಯ<br>ವನೌಷಧಿ<br>ಅಷ್ಟೈಶ್ವರ್ಯ | ಅತ್ಯವಸರ<br>ಜಾತ್ಯತೀತ<br>ಕೋಟ್ಯಧೀಶ್ವರ<br>ಕೋಟ್ಯನುಕೋಟಿ<br>ಮನ್ವಂತರ<br>ಅತ್ಯಾದರ | ವಾಗ್ದೇವಿ<br>ಅಜಂತ<br>ಷಡಾನನ<br>ದಿಗಂತ<br>ಅಬ್ಧಿ | ಪಯಶ್ಶಯನ<br>ಶರಚ್ಚಂದ್ರ<br>ಜಗಜ್ಜ್ಯೋತಿ<br>ಬೃಹಚ್ಛತ್ರ | ಷಣ್ಮುಖ<br>ಸನ್ಮಾನ<br>ವಾಙ್ಮಯ<br>ಉನ್ಮಾದ<br>ತನ್ಮಯ |

# ಸಮಾಸಗಳು

| **ತತ್ಪುರುಷ ಸಮಾಸ** | **ಕರ್ಮಧಾರೆಯ ಸಮಾಸ** | **ದ್ವಿಗು ಸಮಾಸ** | **ಕ್ರಿಯಾ ಸಮಾಸ** | **ಗಮಕ ಸಮಾಸ** | **ಅಂಶಿ ಸಮಾಸ** | **ದ್ವಂದ್ವ ಸಮಾಸ** | **ಬಹುವ್ರೀಹಿ ಸಮಾಸ** |
|---|---|---|---|---|---|---|---|
| ಬೆಟ್ಟದಾವರೆ<br>ತಲೆನೋವು | ಇಮ್ಮಾವು<br>ಮೆಲ್ವಾತು<br>ಹೊಸಗನ್ನಡ | ಮೂಗಾವುದ<br>ಮುಕ್ಕಣ್ಣು<br>ಸಪ್ತಸ್ವರಗಳು<br>ಸಪ್ತವ್ಯಸನಗಳು | ಮೈಮುಚ್ಚು<br>ಕಣ್ದೆರೆ<br>ಕಂಗೆಡು<br>ಕಪ್ಪಡಮುಟ್ಟು<br>ಮೋಸಮಾ<br>ಡು<br>ಕೈಯಾನು<br>ಹೊಗೆದೋರು | ಆಕಲ್ಲು<br>ಈ ಬೆಕ್ಕು<br>ನೆಯ್ದ ವಸ್ತ್ರ | ಅಂಗೈ<br>ಹಿಂದಲೆ<br>ಕಡೆಗಣ್ಣು<br>ಮುಂಗೈ<br>ನಡುರಾತ್ರಿ | ಪಾರ್ಥಭೀಮರು<br>ಗಿರಿವನದುರ್ಗಗಳು<br>ಕರಿರಥತುರಗ<br>ಹನುಮಭೀಮರಾಮ<br>ಮಾದ್ರಮಾಗಧಯಾದವರು | ದಿನಪಸುತ<br>ಅಂತಕಾತ್ಮಜ<br>ಹಣೆಗಣ್ಣ<br>ಮುಕ್ಕಣ್ಣ<br>ಚಕ್ರಪಾಣಿ<br>ಇನತನೂಜ<br>ದನುಜರಿಪು<br>ಮುರಾರಿ<br>ಮೇದಿನೀಪತಿ<br>ರಾಜೀವಸಖ |

**ಕಂಠಪಾಠದ ಪದ್ಯಗಳು 4 ಅಂಕಗಳು**

| | |
|---|---|
| ಕಲುಷಿತವಾದೀ ನದೀಜಲಗಳಿಗೆ<br>ಮುಂಗಾರಿನ ಮಳೆಯಾಗೋಣ<br>ಬರಡಾಗಿರುವೀ ಕಾಡುಮೇಡುಗಳ<br>ವಸಂತವಾಗುತ ಮುಟ್ಟೋಣ | ನೀಲ ಮೇಘ ಮಂಡಲ ಸಮ ಬಣ್ಣ<br>ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ<br>ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು<br>ಸೂರ್ಯ- ಚಂದ್ರರನು ಮಾಡಿದೆ ಕಣ್ಣಾ<br>ಹಕ್ಕಿಹಾರುತಿದೆ ನೋಡಿದಿರಾ? |
| ಮಾರಿಗೌತಣವಾಯ್ತು ನಾಳಿನ<br>ಭಾರತವು ಚತುರಂಗ ಬಲದಲಿ<br>ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು<br>ತೀರಿಸಿಯೆ ಪತಿಯವಸರಕ್ಕೆ ಶ<br>ರೀರವನು ನೂಕುವೆನು ನಿನ್ನಯ<br>ವೀರರೈವರ ನೋಯಿಸೆನು ರಾಜೀವಸಖನಾಣೆ | ನೆಲಕಿರಿವೆನೆಂದು ಬಗೆದಿರೆ<br>ಚಲಕಿರಿವೆಂ ಪಾಂಡುಸುತರೋಳಿನೆಲನಿದು<br>ಪಾಳ್ಗೆಲನೆನಗೆ ದಿನಪಸುತನಂ<br>ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ದಪೆನೇ |
| ಹಸುರಾಗಸ ಹಸುರು ಮುಗಿಲು<br>ಹಸುರು ಗದ್ದೆಯಾ ಬಯಲು<br>ಹಸುರಿನ ಮಲೆ ಹಸುರು ಕಣಿವೆ<br>ಹಸುರು ಸಂಜೆಯೀ ಬಿಸಿಲೂ | ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ<br>ಉಪ್ಪು ಎಣ್ಣಿ ಅರಿಸಿಣ ಜೀರಿಗಿ ಅಕ್ಕಿ ಸಕ್ಕಾರಿ ಬೆಲ್ಲ<br>ಗಂಗಳ ಚರಗಿ ಮಂಗಳ ಸೂತ್ರ ಹೋದವುಬೀಸುಕಲ್ಲಾ<br>ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ |
| ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ<br>ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್<br>ಮಿಗೆನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು<br>ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ<br>ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ<br>ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು | ಅಂತೆಂಬನಾರ್ಗೆ ಪಿರಿದು<br>ಭ್ರಾಂತುದಲೇಂ ದ್ರೋಣನೆಂಬನೇಂ ಪಾರ್ವನೆ ಪೇ<br>ಳೆಂತೆನಗೆ ಕೆಳೆಯನೇ ನೂಂ<br>ಕಂತಪ್ಪನನರಿಯೆನೆಂದು  ಸಭೆಯೊಳ್ ನುಡಿದಂ |

## ಒಂದೊಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು. 7 ಅಂಕಗಳು

**(ಪರೀಕ್ಷೆಯಲ್ಲಿ ಒಟ್ಟು 7 ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳಿರುತ್ತವೆ.ಇವೆಲ್ಲವನ್ನು ರೂಢಿ ಮಾಡಿಕೊಂಡರೆ 7 ಅಂಕಗಳು ಬರುತ್ತವೆ.)**

1. ಭಾಷೆ ಯಾವುದಕ್ಕೆ ಸಾಧನವಾಗಿದೆ?

   ಉತ್ತರ: ಭಾಷೆ, ವಿಚಾರ ವಿನಿಮಯ ಮಾಡುವುದಕ್ಕೆ ಸಾಧನವಾಗಿದೆ.

2. ಪ್ರಾಣಿಗಳು ತಮ್ಮ ಮಕ್ಕಳಿಗೆ ಯಾವ ವಿಚಾರವಾಗಿ ತರಬೇತಿ ಕೊಡುತ್ತವೆ?

   ಉತ್ತರ: ಪ್ರಾಣಿಗಳು ತಮ್ಮ ಮಕ್ಕಳಿಗೆ ಆಹಾರ ವಿಚಾರಗಳ ವಿಚಾರವಾಗಿ ತರಬೇತಿ ಕೊಡುತ್ತವೆ.

3. ಮನುಷ್ಯನಿಗೆ ಲೆಕ್ಕವಿಡುವ ಅವಶ್ಯಕತೆ ಯಾವಾಗ ಉಂಟಾಯಿತು?

   ಉತ್ತರ: ಮನುಷ್ಯನಿಗೆ ಮನೆ ಕೊಟ್ಟಿಕೊಂಡು ಒಂದು ಕಡೆ ನೆಲೆಸಿದಾಗ ಲೆಕ್ಕವಿಡುವ ಅವಶ್ಯಕತೆ ಉಂಟಾಯಿತು.

4. ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ಯಾರು?

   ಉತ್ತರ: ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವರು ನಯಸೇನ ಕವಿ.

5. ಕನ್ನಡಕ್ಕೆ ಪರ್ಶಿಯನ್ ಶಬ್ದಗಳು ಯಾವಾಗ ಬಂದವು?

   ಉತ್ತರ: ಕನ್ನಡಕ್ಕೆ ಪರ್ಶಿಯನ್ ಶಬ್ದಗಳು ಮಹಮ್ಮದಿಯರ ಆಡಳಿತದ ಕಾಲದಲ್ಲಿ ಬಂದವು.

6. ಭಗವದ್ಗೀತೆಯನ್ನು ರಚಿಸಿದವರು ಯಾರು?

   ಉತ್ತರ: ಭಗವದ್ಗೀತೆಯನ್ನು ರಚಿಸಿದವರು ವೇದವ್ಯಾಸರು.

7. ಹುಲಿಗೆ ಪರಮಾನಂದವಾಗಲು ಕಾರಣವೇನು?

   ಉತ್ತರ: ಹುಲಿಗೆ ಶಾನುಭೋಗರ ಶರೀರವನ್ನು ನೋಡಿ ಪರಮಾನಂದವಾಯಿತು.

8. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?

   ಉತ್ತರ: ಹುಲಿಯ ಜೊತೆ ನಡೆದ ಡೊಂಬರಾಟದಿಂದ ಶಾನುಭೋಗರಿಗೆ ತಲೆಸುತ್ತಿತು.

9. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?

   ಉತ್ತರ: ಖಿರ್ದಿ ಪುಸ್ತಕವು ಶಾನುಭೋಗರ ಬ್ರಹ್ಮಾಸ್ತ್ರ

10. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?

    ಉತ್ತರ: ವಿಧಿಯು ಆಹಾರಕ್ಕಾಗಿ ಏನನ್ನು ಒದಗಿಸುವುದೋ ಎಂದು ಹುಲಿಯು ಯೋಚಿಸಿತು.

11. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?

    ಉತ್ತರ: ನಾಲ್ವಡಿ ಕೃಷ್ಣರಾಜ ಒಡೆಯರು 1895 ರಲ್ಲಿ ಪಟ್ಟಾಭಿಷಿಕ್ತರಾದರು.

12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕೆ ಕಂಕಣಬದ್ಧರಾದರು?

    ಉತ್ತರ: ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದರು.

13. ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು?

    ಉತ್ತರ: ಏಷ್ಯಾ ಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಶಿವನಸಮುದ್ರ.

14. ಬ್ರಿಟೀಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?

    ಉತ್ತರ: ಬ್ರಿಟೀಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಸರ್ ಎಂಬ ಪದವಿ ನೀಡಿ ಗೌರವಿಸಿತು.

15. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?

16. ಉತ್ತರ: ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ನಾಲ್ವಡಿ ಕೃಷ್ಣರಾಜ ಒಡೆಯರು.

17. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತದೆ?

ಉತ್ತರ: ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಇಂಜಿನಿಯರ್ ದಿನಾಚರಣೆ ಮಾಡಲಾಗುತ್ತದೆ.

18. ಇಂದಲ್ಲ ನಾಳೆ ಫಲಕೊಡುವ ಅಂಶಗಳು ಯಾವವು?

ಉತ್ತರ: ಭೂಮಿಗೆ ಬಿದ್ದ ಬೀಜ ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವವು.

19. ಮನೆ ಮಂಚಮ್ಮ ಯಾರು?

ಉತ್ತರ: ಮನೆ ಮಂಚಮ್ಮ ಗ್ರಾಮ ದೇವತೆ.

20. ಮನೆ ಮಂಚಮ್ಮನ ಕಥೆ ಹೇಳಿದ ಕವಿ ಯಾರು?

ಉತ್ತರ: ಮನೆ ಮಂಚಮ್ಮನ ಕಥೆ ಹೇಳಿದ ಕವಿ ಸಿದ್ದಲಿಂಗಯ್ಯ

21. ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಯಾರು?

ಉತ್ತರ: ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಹಳಕಟ್ಟಿಯವರು.

22. ವಚನಕಾರರಿಗೆ ಯಾವುದು ದೇವರಾಗಿತ್ತು?

ಉತ್ತರ: ವಚನಕಾರರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.

23. ಅಶೋಕ್ ಪೈ ಅವರ ವೃತ್ತಿ ಯಾವುದು?

ಉತ್ತರ: ಅಶೋಕ್ ಪೈ ಅವರು ಮನೋವೈದ್ಯರಾಗಿದ್ದರು.

24. ನನ್ನ ದೇವರು ಯಾರೆಂಬುದನ್ನ ಸ್ಪಷ್ಟೀಕರಿಸಿರಿ.

ಉತ್ತರ: ಚಾವಣಿ ಇಲ್ಲದ ಗುಡಿಯಲ್ಲಿ ಬುದ್ಧನನ್ನು ಇಟ್ಟರೆ ಅದೇ ಲೇಖಕರ ದೇವರು.

25. ರಾಹಿಲನು ಯಾರು?

ಉತ್ತರ: ರಾಹಿಲನು ಒಬ್ಬ ವೈದ್ಯ ಸೈನಿಕ.

26. ರಾಹಿಲನು ತುರ್ತುಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು?

ಉತ್ತರ: ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಔಷದ ಮತ್ತು ಶಸ್ತ್ರಚಿಕಿತ್ಸಾ ಸಾಮಾನುಗಳ ಪೆಟ್ಟಿಗೆಯನ್ನು ಭದ್ರವಾಗಿ ಹಿಡಿದುಕೊಂಡಿದ್ದನು.

27. ಗಡಿ ಪ್ರದೇಶಗಳಲ್ಲಿ ಬ್ಲಾಕ್‌ಔಟ್ ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ?

ಉತ್ತರ: ಗಡಿ ಪ್ರದೇಶಗಳಲ್ಲಿ ರಾತ್ರಿಯ ವೇಳೆ ವಿಮಾನದ ದಾಳಿಯಿಂದ ತಪ್ಪಿಸಿಕೊಳ್ಳಲು ಬ್ಲಾಕ್ ಔಟ್ ನಿಯಮವನ್ನು ಪಾಲಿಸಲಾಗುತ್ತದೆ.

28. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?

ಉತ್ತರ: ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ ಸಂಕಷ್ಟಕ್ಕಿಡಾದ ಮನುಷ್ಯರ ಕಡೆಯವನುಎಂದನು.

29. ಯುದ್ಧದ ಬಗ್ಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆಗೆದಳು?

ಉತ್ತರ: ಎಲ್ಲರಿಗೂ ದೇಹಕ್ಕೂ ಮನಸಿಗೂ ಗಾಯ ಮಾಡುವುದೇ ಯುದ್ಧದ ಕೆಲಸ ಎಂದು ಗೊಣಗಿಕೊಂಡು ಬಾಗಿಲು ತೆಗೆದಳು.

30. ಶ್ರೀ ರಾಮನ ತಂದೆಯ ಹೆಸರೇನು?

ಉತ್ತರ: ಶ್ರೀ ರಾಮನ ತಂದೆ ಹೆಸರು ದಶರಥ.

31. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?

ಉತ್ತರ: ಶ್ರೀರಾಮನಿಗೆ ಸಮರ್ಪಿಸಲು ಶಬರಿ ಹೂ ಹಣ್ಣು ತಳಿರು ಸಂಗ್ರಹಿಸಿದ್ದಳು.

32. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?

ಉತ್ತರ: ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

33. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?

ಉತ್ತರ: ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಧನು ಎಂಬ ರಾಕ್ಷಸ.

34. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರು ಏನು?

ಉತ್ತರ: ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿ ಹೆಸರು ವೂಲವರ್ಥ.

35. ನೆಲ್ಸನ್ ಅವರ ಮೂರ್ತಿ ಇರುವ ಸ್ಥಳದ ಹೆಸರು?

ಉತ್ತರ: ನೆಲ್ಸನ್ ಅವರ ಮೂರ್ತಿ ಇರುವ ಸ್ಥಳದ ಹೆಸರು ಟ್ರಾಫಲ್ಗಾರ್ ಸ್ಕ್ವೇರ್.

36. ವೆಸ್ಟ್ ಮಿನಿಸ್ಟರ್ ಅಬೆ ಯಾರ ಸ್ಮಾರಕವಾಗಿದೆ?

ಉತ್ತರ: ವೆಸ್ಟ್ ಮಿನಿಸ್ಟರ್ ಅಬೆ ಸತ್ತವರ ಸ್ಮಾರಕವಾಗಿದೆ.

37. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?

ಉತ್ತರ: ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಚೇರಿಂಗ ಕ್ರಾಸ್.

38. ಕೌಸಂಬಿಯ ಅರಸ ಯಾರು?

ಉತ್ತರ: ಕೌಸಂಬಿಯ ಅರಸ ಅತಿಬಲ.

39. ಸೋಮ ಶರ್ಮ ಕಾಶ್ಯಪಿಯರ ಮಕ್ಕಳ ಹೆಸರೇನು?

ಉತ್ತರ: ಸೋಮಶರ್ಮ ಕಾಶ್ಯಪಿಯರ ಮಕ್ಕಳ ಹೆಸರು ಅಗ್ನಿಭೂತಿ ವಾಯುಭೂತಿ.

40. ಕಾಶ್ಯಪಿಯು ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಯಾರ ಬಳಿಗೆ ಕಳುಹಿಸಿದಳು?

ಉತ್ತರ: ಕಾಶ್ಯಪಿಯು ವಿದ್ಯಾಭ್ಯಾಸಕ್ಕಾಗಿ ತನ್ನ ಮಕ್ಕಳನ್ನು ಸೂರ್ಯಮಿತ್ರನ ಬಳಿಗೆ ಕಳುಹಿಸಿದಳು.

41. ಸೂರ್ಯಮಿತ್ರನು ತನಗೆ ಕಾಶ್ಯಪಿಯೆಂಬ ತಂಗಿ ಇಲ್ಲ ಎಂದು ಹೇಳಲು ಕಾರಣವೇನು?

ಉತ್ತರ: ಅಗ್ನಿಭೂತಿ ವಾಯುಭೂತಿಯರಿಗೆ ಸಲುಗೆ ಕೊಡದೆ ಯೋಗ್ಯರನ್ನಾಗಿ ಮಾಡುವ ಕಾರಣದಿಂದ ಹಾಗೆ ಹೇಳಿದ.

42. ಪಂಡಿತರಾದ ಅಗ್ನಿಭೂತಿ, ವಾಯುಭೂತಿಯರಿಗೆ ದೊರೆತ ಪದವಿ ಯಾವುದು?

ಉತ್ತರ: ಪಂಡಿತರಾದ ಅಗ್ನಿಭೂತಿ, ವಾಯುಭೂತಿಯರಿಗೆ ಮಂತ್ರಿ ಪದವಿ ದೊರಕಿತು.

43. ಯಾವುದನ್ನು ಎಚ್ಚರದಲ್ಲಿ ಮುನ್ನಡೆಸಬೇಕು?

ಉತ್ತರ: ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮುನ್ನಡೆಸಬೇಕು.

44. ನದಿ ಜಲಗಳು ಏನಾಗಿವೆ?

ಉತ್ತರ: ನದಿ ಜಲಗಳು ಕಲುಷಿತವಾಗಿವೆ.

45. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?

ಉತ್ತರ: ಕಲುಷಿತವಾದ ನದಿ ಜಲಗಳಿಗೆ ಮುಂಗಾರಿನ ಮಳೆ ಆಗಬೇಕು.

46. ಕಾಡು ಮೇಡುಗಳ ಸ್ಥಿತಿ ಹೇಗಿದೆ?

ಉತ್ತರ: ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದಲ್ಲಿ ಬದುಕಬೇಕಿದೆ.

47. ಹಕ್ಕಿಯು ಯಾವ ವೇಗದಲ್ಲಿ ಹಾರುತ್ತಿದೆ?

ಉತ್ತರ: ಹಕ್ಕಿಯು ಕಣ್ಣು ಮುಚ್ಚಿ ತೆರೆಯುದರೊಳಗೆ ಗಾವುದ ಗಾವುದ ವೇಗದಲ್ಲಿ ಹಾರುತ್ತದೆ.

48. ಹಕ್ಕಿ ಗರಿಯಲ್ಲಿ ಯಾವ ಬಣ್ಣಗಳಿವೆ?

ಉತ್ತರ: ಹಕ್ಕಿ ಗರಿಯಲ್ಲಿ ಬಿಳಿ ಹೊಳೆ ಬಣ್ಣಗಳಿವೆ.

49. ಹಕ್ಕಿಯ ಕಣ್ಣುಗಳು ಯಾವವು?

ಉತ್ತರ: ಹಕ್ಕಿಯ ಕಣ್ಣುಗಳು ಸೂರ್ಯ ಮತ್ತು ಚಂದ್ರರು.

50. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?

ಉತ್ತರ: ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

51. ಹಕ್ಕಿಯು ಯಾರನ್ನು ಹರಸಿದೆ?

ಉತ್ತರ: ಹಕ್ಕಿಯು ಹೊಸಗಾಲದ ಹಸು ಮಕ್ಕಳನ್ನು ಹರಿಸಿದೆ.

52. ಹಕ್ಕಿಯು ಯಾವುದರ ಸಂಕೇತವಾಗಿದೆ?

ಉತ್ತರ: ಹಕ್ಕಿಯು ಕಾಲದ ಸಂಕೇತವಾಗಿದೆ.

53. ಹಕ್ಕಿಯ ಚುಂಚಗಳು ಎಲ್ಲಿಯವರೆಗೂ ಚಾಚಿವೆ?

ಉತ್ತರ: ಹಕ್ಕಿಯ ಚುಂಚಗಳು ದಿಗ್ಮಂಡಲಗಳ ಅಂಚಿನವರೆಗೂ ಚಾಚಿವೆ.

54. ಶ್ರೀ ಕೃಷ್ಣನ್ನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?

ಉತ್ತರ: ಶ್ರೀ ಕೃಷ್ಣನು ಕರ್ಣನನ್ನ ರಥದಲ್ಲಿ ಮೈದುನತನದ ಸರಸವನ್ನು ಎಸೆಗಿ ಕೂರಿಸಿಕೊಂಡನು.

55. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?

ಉತ್ತರ: ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವರು.

56. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನನು ಭಿಷ್ಮಚಾರ್ಯರಿಗೆ ಹೇಳುತ್ತಾನೆ?

ಉತ್ತರ: ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನನು ಯಾರಿಗೆ ಹೇಳುತ್ತಾನೆ.

57. ದಿನಪಸುತ ಎಂದರೆ ಯಾರು?

ಉತ್ತರ: ದಿನಪಸುತ ಎಂದರೆ ಕರ್ಣ.

58. ಅಂತಕಾತ್ಮಜ ಎಂದರೆ ಯಾರು?

ಉತ್ತರ: ಅಂತಕಾತ್ಮಜ ಎಂದರೆ ಧರ್ಮರಾಯ.

59. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ಯಾರು?

ಉತ್ತರ: ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವರು ಧುರ್ಯೋಧನ.

60. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿ ಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ?

ಉತ್ತರ: ಅರ್ಜುನ ಮತ್ತು ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿ ಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.

61. ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ?

ಉತ್ತರ: ಅಶ್ವಯುಜದ ಭತ್ತದ ಗದ್ದೆಯ ಬಣ್ಣ ಗಿಳಿಯ ಹಸುರಿನಂತಿದೆ.

62. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ?

ಉತ್ತರ: ಕವಿಯು ನೋಡಿದ ಅಡಕೆಯ ತೋಟ ಬಣದ ಅಂಚಿನಲ್ಲಿದೆ.

63. ಹಸುರು ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ?

ಉತ್ತರ: ಹಸುರು ನವರಾತ್ರಿಯ ನವಧಾತ್ರಿಯ ಶ್ಯಾಮಲ ವನಧಿಯ ಕಂಡು ಪ್ರೇರಿತವಾದ ಕವನವಾಗಿದೆ.

64. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?

ಉತ್ತರ: ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಹೊಸಪಚ್ಚೆಯ ಜಮಖಾನೆಯಂತೆ ಕಂಡಿದೆ.

65. ಕಂಪನಿ ಸರ್ಕಾರ ಹೊರಡಿಸಿದ ಆದೇಶ ಏನು?

ಉತ್ತರ: ಕಂಪನಿ ಸರ್ಕಾರ ಹೊರಡಿಸಿದ ಆದೇಶ ನಿಶಸ್ತ್ರೀಕರಣ ಕಾಯ್ದೆ

66. ಹಲಗಲಿಯ ನಾಲ್ವರು ಪ್ರಮುಖರು ಯಾರು?

ಉತ್ತರ: ಹಲಗಲಿಯ ನಾಲ್ವರು ಪ್ರಮುಖರು ಪೂಜಾರಿ ಹನುಮ, ಬೇಡರ ಬಾಲ, ಜಡಗ ಮತ್ತು ರಾಮ.

67. ಹಲಗಲಿ ಗುರುತು ಉಳಿಯದಂತಾದದ್ದು ಏಕೆ?

ಉತ್ತರ: ಹಲಗಲಿಗೆ ಬೆಂಕಿ ಹಾಕಿ ಸುಟ್ಟು ಬೂದಿ ಮಾಡಿದ್ದರಿಂದ ಗುರುತು ಉಳಿದಂತಾಯಿತು.

68. ಹಲಗಲಿ ಗ್ರಾಮ ಎಲ್ಲಿದೆ?

ಉತ್ತರ: ಹಲಗಲಿ ಗ್ರಾಮ ಇಂದಿನ ಬಾಗಲಕೋಟೆ ಜಿಲ್ಲೆಯಲ್ಲಿದೆ.

69. ಯಜ್ಞಾಶ್ವವನ್ನ ಕಟ್ಟಿದವರು ಯಾರು?

ಉತ್ತರ: ಯಜ್ಞಾಶ್ವವನ್ನ ಕಟ್ಟಿದವರು ವೀರಲವ.

70. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?

ಉತ್ತರ: ಕುದುರೆಯನ್ನು ಲವನು ಉತ್ತರೀಯದಿಂದ ಕಟ್ಟಿದನು.

71. ಮುನಿಸುತರು ಹೆದರಲು ಕಾರಣವೇನು?

ಉತ್ತರ: ಲವನು ಕುದುರೆಯನ್ನು ಕಟ್ಟಿದ್ದರಿಂದ ಮುನಿಸುತರು ಹೆದರಿದರು.

72. ದ್ರೋಣನು ಪರುಶುರಾಮರಲ್ಲಿಗೆ ಏಕೆ ಬಂದನು?

ಉತ್ತರ: ದ್ರೋಣನು ಪರಶುರಾಮರಲ್ಲಿಗೆ ಸಹಾಯವನ್ನು ಕೇಳಲು ಬಂದನು.

73. ದ್ರೋಣನು ಯಾರೊಡನೆ ಪರಶುರಾಮರ ಬಳಿಗೆ ಬಂದನು?

ಉತ್ತರ: ದ್ರೋಣನ್ನು ಅಶ್ವತ್ಥಾಮನೊಡನೆ ಪರಶುರಾಮರಲ್ಲಿಗೆ ಬಂದನು.

74. ಪರುಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವವು?

ಉತ್ತರ: ಪರಶುರಾಮರು ದ್ರೋಣನಿಗೆಕೊಟ್ಟ ಅಸ್ತ್ರಗಳು ವಾರಣ, ವಾಯವ್ಯ, ಆಗ್ನೇಯ, ಪೌರಂದರ.

75. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು?

76. ಉತ್ತರ: ದ್ರುಪದನು ಪಡಿಯರನಿಗೆ ಅವನು ಯಾರೆಂದು ನಾನು ತಿಳಿಯನು, ಅವನ ಹಿಡಿದು ಹೊರಗಡೆ ತಳ್ಳು ಎಂದನು.

77. ಪುಟ್ಟಪೋರಿ ಏನು ಮಾಡುತ್ತಿದ್ದಾಳೆ?

ಉತ್ತರ: ಪುಟ್ಟಪೋರಿ ಮುಸರೆ ತಿಕ್ಕುತ್ತಿದ್ದಾಳೆ.

78. ಪುಟ್ಟಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ?

ಉತ್ತರ: ಪುಟ್ಟಪೋರಿಯ ಅಮ್ಮ ಗುಡಿಸಿನಲ್ಲಿ ಮಲಗಿದ್ದಾಳೆ.

79. ಯಾರಿಗೆ ವಸಂತ ಮುಖ ತೋರಲಿಲ್ಲ?

ಉತ್ತರ: ಕುಂಬಾರ, ಕಮ್ಮಾರ, ನೇಕಾರ ಮತ್ತು ಕೇರಿಯ ಮಾರನಿಗೆ ವಸಂತ ಮುಖ ತೋರಲಿಲ್ಲ.

80. ಬಾಲ ರವಿ ಎಲ್ಲಿ ಸೊರಗಿದ್ದಾನೆ?

ಉತ್ತರ: ಬಾಲ ರವಿಯು ಅಮ್ಮನ ತೂತು ಬಿದ್ದ ಸೀರೆಯಲ್ಲಿ ಸೊರಗಿದ್ದಾನೆ.

81. ಜಲಿಯನ್ ವಾಲಾಬಾಗ್ ನಲ್ಲಿ ಶಾಂತಿಯುತ ಸಭೆ ಯಾವಾಗ ನಡೆಯಿತು?

ಉತ್ತರ: ಜಲಿಯನ್ ವಾಲಾಬಾಗ್ ನಲ್ಲಿ 1919 ಏಪ್ರಿಲ್ 13ರಂದು ಶಾಂತಿಯುತ ಸಭೆ ನಡೆಯಿತು.

82. ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆ ಗೆರೆದ ಅಧಿಕಾರಿಯ ಹೆಸರೇನು?

ಉತ್ತರ: ಅಮಾಯಕ ಭಾರತೀಯರ ಮೇಲೆ ಗುಂಡಿನ ಮಳೆ ಗೆರೆದ ಅಧಿಕಾರಿ ಜನರಲ್ ಡಯರ್.

83. ಕ್ರಿಯಾ ಸ್ವಾತಂತ್ರ್ಯ ಎಂದರೇನು?

ಉತ್ತರ: ತನಗೆ ಇಷ್ಟ ಬಂದ ಕೆಲಸವನ್ನು ಮಾಡಲು ವ್ಯಕ್ತಿಗೆ ಇರುವ ಅವಕಾಶವನ್ನು ಕ್ರಿಯಾ ಸ್ವಾತಂತ್ರ್ಯ ಎನ್ನುತ್ತಾರೆ.

84. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು?

ಉತ್ತರ: ಅಕ್ಕಮಹಾದೇವಿಯ ವಚನಗಳ ಅಂಕಿತ ಚೆನ್ನಮಲ್ಲಿಕಾರ್ಜುನ.

85. ಅರಿಯದರೊಡನೆ ಸಂಗ ಮಾಡಿದರೆ ಆಗುವ ಪರಿಣಾಮವೇನು?

ಉತ್ತರ: ಅರಿಯದರೊಡನೆ ಸಂಗ ಮಾಡಿದರೆ ಕಲ್ಲಹೊಯ್ದು ಕಿಡಿಯ ತೆಗೆದುಕೊಂಡಂತೆ.

86. ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗದ ಹೆಸರೇನು?

ಉತ್ತರ: ಪೈಗಳು ಬರೆದ ಮೊದಲ ಯಕ್ಷಗಾನ ಪ್ರಸಂಗ ಮಕರಾಕ್ಷನ ಕಾಳಗ.

87. ಬಾಷಲ್ ಮಿಷನ್ ರವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು?

ಉತ್ತರ: ಹಳೆಗನ್ನಡದ ವ್ಯಾಕರಣ ಸೂತ್ರಗಳು.

88. ಬಿಲ್ಲಹಬ್ಬವನ್ನು ರಚಿಸಿದ ಕವಿ ಯಾರು?

ಉತ್ತರ: ಬಿಲ್ಲಹಬ್ಬವನ್ನು ರಚಿಸಿದ ಕವಿ ಮುಲ್ಕಿ ವಾಸುದೇವ ಪ್ರಭು.

89. ಮುದ್ದಣ್ಣ ಕವಿ ಲೇಖಕರಿಗೆ ಏನೆಂದು ಸಲಹೆ ಕೊಟ್ಟರು?

ಉತ್ತರ: ಮುದ್ದಣ್ಣ ಕವಿ ಲೇಖಕರಿಗೆ ನೀನು ಬರೆಯುವುದನ್ನು ಮುಂದುವರಿಸು ಎಂದು ಸಲಹೆ ಕೊಟ್ಟರು.

90. ಪ್ರಾಸ ಬಿಟ್ಟ ನಂತರ ಪೈಗಳು ಯಾವ ಕೃತಿಯನ್ನು ಬರೆದರು?

ಉತ್ತರ: ಪ್ರಾಸ ಬಿಟ್ಟ ನಂತರ ಪೈಗಳು ಆಯಿ ಭುವನ್ ಮನಮೋಹಿನಿ ಕೃತಿಯನ್ನು ಬರೆದರು.

91. ಯಾರಿಗೆ ಗುರುವಾಣಿ ಹೊರೆ ಎನಿಸುತ್ತದೆ?

ಉತ್ತರ: ಮೂರ್ಖನ ಕಿವಿಗೆ ಗುರುವಾಣಿ ಹೊರೆ ಎನಿಸುತ್ತದೆ.

92. ಯಾರ ಕಿವಿಗೆ ಉಪದೇಶ ನಾಟುವುದಿಲ್ಲ?

ಉತ್ತರ: ರಾಜಮನೆತನದಲ್ಲಿ ಹುಟ್ಟಿದವರ ಕಿವಿಗೆ ಉಪದೇಶ ನಾಟುವುದಿಲ್ಲ.

93. ಯಾರಿಗೆ ಜಗತ್ತು ಕ್ಷುದ್ರವಾಗಿ ಕಾಣುತ್ತದೆ?

ಉತ್ತರ: ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತು ಕ್ಷುದ್ರವಾಗಿ ಕಾಣಿಸುತ್ತದೆ.

**ಲೇಖಕರ / ಕವಿ ಪರಿಚಯ** **6 ಅಂಕಗಳು**

**ಎಂ. ಮರಿಯಪ್ಪ ಭಟ್ಟ :** ಎಂ ಮರಿಯಪ್ಪ ಭಟ್ಟರು 1906 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಕಬಕ ಗ್ರಾಮದಲ್ಲಿ ಜನಿಸಿದರು. ಇವರು ತುಳು-ಇಂಗ್ಲಿಷ್ ನಿಘಂಟು, ಅಭಿನವ ಮಂಗರಾಜನ ನಿಘಂಟು, ಜಾತಕ ತಿಲಕಂ, ಛಂದಸ್ಸಾರ ಎಂಬ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ಕರ್ನಾಟಕ ಸರ್ಕಾರದ ಪುರಸ್ಕಾರ,ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಜಿ.ಎಸ್.ಶಿವರುದ್ರಪ್ಪ :** ಜಿ.ಎಸ್ ಶಿವರುದ್ರಪ್ಪ ಅವರು 1926 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಜನಿಸಿದರು. ಸಾಮಗಾನ, ಚೆಲುವು-ಒಲವು, ದೀಪದಹೆಜ್ಜೆ, ಮಾಸ್ಕೋದಲ್ಲಿ 22 ದಿನಗಳು ಹೀಗೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ರಾಷ್ಟ್ರಕವಿ ಹಾಗೂ ಪಂಪ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಎ.ಎನ್.ಮೂರ್ತಿರಾವ್** : ಕವಿ ಎ.ಎನ್. ಮೂರ್ತಿರಾವ್ ರವರು 1900 ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್. ಇವರು ಹಗಲುಗನಸು, ಅಲೆಯುವ ಮನ, ಮಿನುಗು ಮಿಂಚು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇವರು ಎಂಬ ಕೃತಿಗೆ ಪಂಪ ಪ್ರಶಸ್ತಿ ದೊರಕಿದೆ.

**ದ.ರಾ.ಬೇಂದ್ರೆ :**ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕವಿ ದ.ರಾ ಬೇಂದ್ರೆಯವರು 1896 ರಲ್ಲಿ ಧಾರವಾಡದಲ್ಲಿ ಜನಿಸಿದರು. ಇವರು ಗರಿ, ನಾದಲೀಲೆ, ಮೇಘದೂತ, ಸಖೀಗೀತ, ಸೂರ್ಯಪಾನ, ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಜ್ಞಾನಪೀಠ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಡಿ.ಎಸ್.ಜಯಪ್ಪಗೌಡ :** ಕವಿ ಡಿ.ಎಸ್ ಜಯಪ್ಪಗೌಡ ಅವರು 1947 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿಯಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ. ಇವರು ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಮೈಸೂರು ಒಡೆಯರು ಮತ್ತು ಜನಪದ ಆಟಗಳು ಎಂಬ ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ದೇವನೂರು ಮಹಾದೇವ :** ಕವಿ ದೇವನೂರು ಮಹಾದೇವ ಅವರು 1948 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರುನಲ್ಲಿ ಜನಿಸಿದರು. ಇವರು ದ್ಯಾವನೂರು, ಒಡಲಾಳ,ಕುಸುಮಬಾಲೆ, ಎದೆಗೆ ಬಿದ್ದ ಅಕ್ಷರ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಒಡಲಾಳ ಕೃತಿಗೆ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಕುಮಾರವ್ಯಾಸ** : ಕುಮಾರವ್ಯಾಸ ಎಂದು ಪ್ರಸಿದ್ಧರಾಗಿರುವ ಗದುಗಿನ ನಾರಣಪ್ಪನವರು 1430 ರಲ್ಲಿ ಗದಗ ಪ್ರಾಂತದ ಕೋಳಿವಾಡದಲ್ಲಿ ಜನಿಸಿದರು. ಇವರು ಕರ್ಣಾಟ ಭಾರತ ಕಥಾಮಂಜರಿ ಮತ್ತು ಐರಾವತ ಎಂಬ ಕೃತಿಗಳನ್ನು ರಚಿಸಿದ್ದಾರೆ .ಇವರು ರೂಪಕ ಸಾಮ್ರಾಜ್ಯದ ಚಕ್ರವರ್ತಿ ಎಂಬ ಬಿರುದನ್ನು ಹೊಂದಿದ್ದಾರೆ.

**ಸಾರಾ ಅಬೂಬಕ್ಕರ್** : ಕವಿ ಸಾರಾ ಅಬೂಬಕ್ಕರ್ ಅವರು 1936 ರಲ್ಲಿ ಕಾಸರಗೋಡಿನಲ್ಲಿ ಜನಿಸಿದರು. ಇವರು ಸಹನಾ, ಕದನ ವಿರಾಮ, ವಜ್ರಗಳು, ಚಪ್ಪಲಿಗಳು, ಹೀಗೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ನೃಪತುಂಗ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ರನ್ನ :** ಕವಿ ರನ್ನ ಅವರು 949 ರಲ್ಲಿ ಬಾಗಲಕೋಟ ಜಿಲ್ಲೆಯ ಮುಧೋಳ ಎಂಬ ಗ್ರಾಮದಲ್ಲಿ ಜನಿಸಿದರು. ಇವರು ಸಾಹಸ ಭೀಮ ವಿಜಯ, ಅಜಿತ ತೀರ್ಥಂಕರ ಪುರಾಣ ತಿಲಕಂ, ಪರಶುರಾಮ ಚರಿತಂ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕವಿ ಚಕ್ರವರ್ತಿ ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ.

**ಪು.ತಿ.ನ :** ಪು.ತಿ.ನ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ ನರಸಿಂಹಾಚಾರ್ ಇವರು 1905 ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಇವರು ಶಬರಿ, ರಥಸಪ್ತಮಿ, ಹಣತೆ, ರಸಸರಸ್ವತಿ, ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಕುವೆಂಪು** : ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು 1904 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳಿಯಲ್ಲಿ ಜನಿಸಿದರು. ಇವರು ಕೊಳಲು, ಪಾಂಚಜನ್ಯ, ಪ್ರೇಮ ಕಾಶ್ಮೀರ, ಪಕ್ಷಿಕಾಶಿ, ನನ್ನ ದೇವರು ಹೀಗೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ಪಂಪ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ವಿ.ಕೃ.ಗೋಕಾಕ್ :** ವಿನಾಯಕ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ್ ಕೃಷ್ಣ ಗೋಕಾಕ್ ರವರು 1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು. ಇವರು ಸಮುದ್ರ ಗೀತೆ, ಪಯಣ, ಉಗಮ, ಇಜ್ಜೋಡು, ಹೀಗೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**ಶಿವಕೋಟ್ಯಾಚಾರ್ಯ :** ಶಿವಕೋಟ್ಯಾಚಾರ್ಯರು ಕ್ರಿಸ್ತಶಕ ಸುಮಾರು 10ನೇ ಶತಮಾನದವರು. ಇವರು ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ಕೋಗಳಿ ನಾಡಿನಲ್ಲಿ ಜನಿಸಿದರು. ಇವರು ವಡ್ಡಾರಾಧನೆ ಎಂಬ ಕೃತಿ ಬರೆದಿದ್ದಾರೆ. ಇದು ಕನ್ನಡದ ಪ್ರಥಮ ಗದ್ಯಕೃತಿ ಆಗಿದೆ.

**ಲಕ್ಷ್ಮೀಶ :** ಕವಿ ಲಕ್ಷ್ಮೀಶ 1550 ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರಿನಲ್ಲಿಜನಿಸಿದ್ದಾರೆ.. ಇವರು ಜೈಮಿನಿ ಭಾರತ ಎಂಬ ಪ್ರಸಿದ್ಧ ಕೃತಿ ರಚಿಸಿದ್ದಾರೆ. ಇವರಿಗೆ ಉಪಮಾಲೋಲ, ಕರ್ನಾಟಕ ಕವಿಚೂತನವನ ಚೈತ್ರ ಎಂಬ ಬಿರುದುಗಳಿದ್ದವು.

**ಪಂಪ** : ಪಂಪ ಮಹಾಕವಿ 902 ರಲ್ಲಿ ವೆಂಗಿ ಮಂಡಲದ ವೆಂಗಿಪಳು ಎಂಬ ಅಗ್ರಹಾರದಲ್ಲಿ ಜನಿಸಿದ್ದಾರೆ. ಚಾಲುಕ್ಯರ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಇವರು ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯಂ ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾರೆ.ಇವರಿಗೆ ಸಂಸಾರ ಸಾರೋದಯ ಮತ್ತು ಕವಿತಾ ಗುಣಾರ್ಣವ ಎಂಬ ಬಿರುದುಗಳಿದ್ದವು.

## ಕವಿ/ಲೇಖಕರ ಪರಿಚಯದ ಪಟ್ಟಿ

| ಕ್ರ. ಸಂ | ಪಾಠದ ಹೆಸರು | ಕೃತಿಕಾರರು | ಜನ್ಮಸ್ಥಳ | ಕಾಲ | ಕೃತಿಗಳು | ಪ್ರಶಸ್ತಿ/ಬಿರುದು |
|---|---|---|---|---|---|---|
| 1 | ನಮ್ಮಭಾಷೆ | ಎಂ ಮರಿಯಪ್ಪ ಭಟ್ಟ | ದಕ್ಷಿಣ ಕನ್ನಡ ಜಿಲ್ಲೆಯ ಕಬಕ. | 1906 | ಜಾತಕತಿಲಕ,ಛಂಧಸ್ಸಾರ, ತುಳು ಇಂಗ್ಲೀಷ್ ನಿಘಂಟು | ಸಾಹಿತ್ಯ ಅಕಾಡಮಿ ಪ್ರಶಸ್ತಿ |
| 2 | ವ್ಯಾಘ್ರಗೀತೆ | ಎ.ಎನ್.ಮೂರ್ತಿರಾವ್ | ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳು | 1900 | ಮಿನಗು ಮಿಂಚು,ಅಲೆಯುವ ಮನ, ಹಗಲುಗನಸು | ಕೇಂದ್ರ ಸಾಹಿತ್ಯ ಅಕಾಡಮಿ |
| 3 | ಭಾಗ್ಯಶಿಲ್ಪಿಗಳು | ಡಿ.ಎಸ್.ಜಯಪ್ಪಗೌಡ | ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿ | 1947 | ಜನಪದ ಆಟಗಳು,ಮೈಸೂರು ಒಡೆಯರು, ದಿವಾನ್ ಸರ್ ಎಮ್ ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು, | ಕರ್ನಾಟಕ ಸಾಹಿತ್ಯ ಅಕಾಡಮಿ |
| 4 | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ಮೈಸೂರು ಜಿಲ್ಲೆಯ ದೇವನೂರು | 1948 | ದ್ಯಾವನೂರು,ಒಡಲಾಳ, ಎದೆಗೆ ಬಿದ್ದ ಅಕ್ಷರ, ಕುಸುಮಬಾಲೆ | ಕೇಂದ್ರ ಸಾಹಿತ್ಯ ಅಕಾಡಮಿ |
| 5 | ಸಂಕಲ್ಪಗೀತೆ | ಜಿ.ಎಸ್.ಶಿವರುದ್ರಪ್ಪ | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ | 1936 | ಎದೆ ತುಂಬಿ ಹಾಡಿದೆನು, ಸಾಮಗಾನ, ದೇವಶಿಲ್ಪ, ಅನಾವರಣ | ಪಂಪ ಪ್ರಶಸ್ತಿ, ರಾಷ್ಟ್ರಕವಿ |
| 6 | ಹಕ್ಕಿ ಹಾರುತಿದೆ ನೋಡಿದಿರಾ | ದ.ರಾ.ಬೇಂದ್ರೆ | ಧಾರವಾಡ | 1896 | ಗರಿ, ನಾದಲೀಲೆ, ಸಖಿಗೀತ, ಉಯ್ಯಾಲೆ | ಜ್ಞಾನಪೀಠ ಪ್ರಶಸ್ತಿ |
| 7 | ಕೌರವೇಂದ್ರನ ಕೊಂದೆ ನೀನು | ಕುಮಾರವ್ಯಾಸ | ಗದಗ ಪ್ರಾಂತದ ಕೋಳಿವಾಡ | 1430 | ಕರ್ಣಾಟ ಭಾರತ ಕಥಾಮಂಜರಿ, ಐರಾವತ | ರೂಪಕ ಸಾಮ್ರಾಜ್ಯದ ಚಕ್ರವರ್ತಿ |
| 8 | ಛಲಮನೆ ಮೆರೆವೆಂ | ರನ್ನ | ಬಾಗಲಕೋಟ ಜಿಲ್ಲೆಯ ಮುಧೋಳ | 949 | ಸಾಹಸಭೀಮ ವಿಜಯ, ಅಜಿತ ತೀರ್ಥಂಕರ ಪುರಾಣ ತಿಲಕಂ | ಕವಿಚಕ್ರವರ್ತಿ, |
| 9 | ಯುದ್ಧ | ಸಾ.ರಾ.ಅಬೂಬಕ್ಕರ್ | ಕಾಸರಗೋಡು | 1936 | ಸಹನಾ, ಕದನವಿರಾಮ,ಚಪ್ಪಲಿಗಳು,ವಜ್ರಗಳು | ನೃಪತುಂಗ ಪ್ರಶಸ್ತಿ |
| 10 | ಶಬರಿ | ಪು.ತಿ.ನರಸಿಂಹಾಚಾರ್ | ಮಂಡ್ಯ ಜಿಲ್ಲೆಯ ಮೇಲುಕೋಟೆ | 1905 | ಅಹಲ್ಯೆ, ಗೋಕುಲ ನಿರ್ಗಮನ, ಶಬರಿ, ರಥಸಪ್ತಮಿ | ಪಂಪ ಪ್ರಶಸ್ತಿ |
| 11 | ಲಂಡನ್ ನಗರ | ವಿ.ಕೃ.ಗೋಕಾಕ್ | ಹಾವೇರಿ ಜಿಲ್ಲೆಯ ಸವಣೂರು | 1909 | ಪಯಣ, ಸಮುದ್ರಾಚೆಯಿಂದ, ಉಗಮ, ಇಜ್ಜೋಡು | ಜ್ಞಾನಪೀಠ ಪ್ರಶಸ್ತಿ |

| | | | | | | |
|---|---|---|---|---|---|---|
| 12 | ಅಗ್ನಿಭೂತಿ ವಾಯುಭೂತಿಯರ ಕಥೆ | ಶಿವಕೋಟ್ಯಾಚಾರ್ಯ | ವಿಜಯನಗರ ಜಿಲ್ಲೆಯ ಕೋಗಳಿನಾಡು | 10ನೇ ಶತಮಾನ | ವಡ್ಡಾರಾಧನೆ | - |
| 13 | ಹಸುರು | ಕುವೆಂಪು | ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿ | 1904 | ಪಕ್ಷಿಕಾಶಿ, ಕೊಳಲು, ನವಿಲು, ಜಲಗಾರ | ಜ್ಞಾನಪೀಠ ಪ್ರಶಸ್ತಿ |
| 14 | ವೀರಲವ | ಲಕ್ಷ್ಮೀಶ | ಚಿಕ್ಕಮಗಳೂರು ಜಿಲ್ಲೆಯ ದೇವನೂರು | 1550 | ಜೈಮಿನಿ ಭಾರತ | ಪಮಾಲೋಲ |
| 15 | ಕೆಮ್ಮನೇ ಮೀಸೆವೊತ್ತೆನೇ | ಪಂಪ | ವೆಂಗಿಮಂಡಲದ ವೆಂಗಿಪಳು | 902 | ವಿಕ್ರಮಾರ್ಜುನ ವಿಜಯ, ಆದಿಪುರಾಣ | ಸರಸ್ವತಿ ಮಣಿಹಾರ |

**ಛಂಧಸ್ಸಿನ ಪದ್ಯಗಳು** **3 ಅಂಕಗಳು**

---

– ᑌ | – –|– ᑌ | – –|

ಏನು ಹೇಳ್ವೈ ಕರ್ಣ ಚಿತ್ತ

– ᑌ | – ᑌ ᑌ | ᑌ ᑌ ᑌ | – – |

ಗ್ಲಾನಿ ಯಾವುದು ಮನಕೆ ಕುಂತೀ

– ᑌ| ᑌᑌ ᑌᑌ| –ᑌ| – ᑌ ᑌ | – ᑌ| – ᑌᑌ|–

ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ **ಭಾಮಿನಿ ಷಟ್ಪದಿ**

---

– ᑌ – | – – ᑌ |ᑌᑌᑌ ᑌ ᑌ| – – ᑌ |

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

– ᑌ – | – ᑌ– |ᑌ ᑌ – ᑌ |ᑌ ᑌ ᑌ ᑌ ᑌ| – ᑌ ᑌᑌ| – ᑌ – | – ᑌ – |

ನೊರ್ವನೇ ವೀರನಾತನ ಯಜ್ಞ ತುರಗಮಿದು ನಿರ್ವಹಿಸಲಾರ್ಪರಾರಾದೊಡಂ **ವಾರ್ಧಕ ಷಟ್ಪದಿ**

---

– ᑌ ᑌ| – ᑌ ᑌ | – ᑌ ᑌ |

ಪುಟ್ಟಿದ ನೂರ್ವರುಮೆನ್ನೊಡ

– ᑌᑌ | – ᑌ ᑌ |ᑌ – ᑌ | – ᑌ ᑌ | – – |

ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ **ಕಂದಪದ್ಯ**

---

– – |ᑌ – ᑌ | ᑌ ᑌ – |

ಅಂತೆಂಬನಾರ್ಗೆ ಪಿರಿದುಂ

– ᑌ ᑌ| – – | ᑌ –ᑌ | – – | ᑌ ᑌ _ |

ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ **ಕಂದಪದ್ಯ**

---

ನ ಜ ಭ ಜ ಜ ಜ ರ

ᑌ ᑌ ᑌ |ᑌ – ᑌ | – ᑌ ᑌ |ᑌ – ᑌ | ᑌ – ᑌ |ᑌ – ᑌ | – ᑌ – |

ಖಳನೊಳವಿಂಗೆಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂ **ಚಂಪಕಮಾಲಾ ವೃತ್ತ**

---

ಭ ರ ನ ಭ ಭ ರ ಲ, ಗು

– ᑌ ᑌ |– ᑌ – | ᑌ ᑌ ᑌ | –ᑌ ᑌ |– ᑌ ᑌ | – ᑌ – |ᑌ –

ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು **ಉತ್ಪಲಮಾಲಾವೃತ್ತ**

ಳ್ಳನ್ನೆಮ್

---

**ಅಲಂಕಾರಗಳು 3 ಅಂಕಗಳು**

**ಭೀಮ ದುರ್ಯೋಧನರು ಮದ ಗಜಗಳಂತೆ ಹೋರಾಡಿದರು.**

ಅಲಂಕಾರ: **ಉಪಮಾ ಅಲಂಕಾರ**

ಉಪಮೇಯ: ಭೀಮ ದುರ್ಯೋಧನರು

ಉಪಮಾನ : ಮದಗಜಗಳು

ವಾಚಕ ಪದ: ಅಂತೆ

ಸಮಾನ ಧರ್ಮ: ಹೋರಾಡಿದರು

ಸಮನ್ವಯ : ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿದ್ದರಿಂದ ಇದು ಉಪಮಾಲಂಕಾರ.

---

- **ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ. –**
- **ಉಪಮಾಲಂಕಾರ**

ಉಪಮೇಯ: ನೀಚರಿಗೆ ಮಾಡಿದ ಉಪಕಾರ

ಉಪಮಾನ : ಹಾವಿಗೆ ಹಾಲೆರೆಯುವುದು

ವಾಚಕ ಪದ: ಅಂತೆ

ಸಮಾನ ಧರ್ಮ: ವ್ಯರ್ಥ

ಸಮನ್ವಯ : ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಹಾಲೆರೆಯುವುದಕ್ಕೆ ಹೋಲಿಸಿದ್ದರಿಂದ ಇದು ಉಪಮಾಲಂಕಾರ.

---

- **ಮರನೇರಿದ ಮರ್ಕಟನಂತೆ –**
- **ಉಪಮಾಲಂಕಾರ**

ಉಪಮೇಯ: ಲುಪ್ತವಾಗಿದೆ (ಮನಸ್ಸು)

ಉಪಮಾನ : ಮರನೇರಿದ ಮರ್ಕಟ

ವಾಚಕ ಪದ: ಅಂತೆ

ಸಮಾನ ಧರ್ಮ: ಚಂಚಲತೆ

ಸಮನ್ವಯ : ಉಪಮೇಯವಾದ ಮನಸ್ಸನ್ನು ಉಪಮಾನವಾದ ಮರನೇರಿದ ಮರ್ಕಟಕ್ಕೆ ಹೋಲಿಸಿದ್ದರಿಂದ ಇದು ಉಪಮಾಲಂಕಾರ.

---

- **ಒಳಗಿನ ಮಂದಿ ಗುಂಡು ಹೊಡೆದರೂ ಮುಂಗಾರಿ ಸಿಡಿಲ ಸಿಡಿದ್ಹಾಂಗ -**
- **ಉಪಮಾಲಂಕಾರ**

ಉಪಮೇಯ: ಒಳಗಿನ ಮಂದಿ ಗುಂಡು ಹೊಡೆಯುವುದು

ಉಪಮಾನ : ಸಿಡಿಲ ಸಿಡಿಯುವುದು

ವಾಚಕ ಪದ: ಹಾಂಗ (ಹಾಗೆ)

ಸಮಾನ ಧರ್ಮ: ಭಯಂಕರತೆ

ಸಮನ್ವಯ : ಉಪಮೇಯವಾದ ಒಳಗಿನ ಮಂದಿ ಗುಂಡು ಹೊಡೆಯುವುದನ್ನು ಉಪಮಾನವಾದ ಸಿಡಿಲ ಸಿಡಿಯುವುದಕ್ಕೆ ಹೋಲಿಸಿದ್ದರಿಂದ ಇದು ಉಪಮಾಲಂಕಾರ.

- **ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ.**
- **ಉಪಮಾಲಂಕಾರ**

  ಉಪಮೇಯ: ಗುಂಡು ಸುರಿಯುವುದು

  ಉಪಮಾನ : ಸಿಡಿಲ ಸಿಡಿಯುವುದು

  ವಾಚಕ ಪದ: ಹಾಂಗ (ಹಾಗೆ)

  ಸಮಾನ ಧರ್ಮ: ಭಯಂಕರತೆ

  ಸಮನ್ವಯ : ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲ ಸಿಡಿಯುವುದಕ್ಕೆ ಹೋಲಿಸಿದ್ದರಿಂದ ಇದು ಉಪಮಾಲಂಕಾರ.

---

**ನೊಳವಿಂಗೆ ಕುಪ್ಪೆ ವರಮೆಂಬವೊಲಾಂಬರಮುಂಟೆ ನಿನ್ನದೊಂದಳವು?**

- **ಉಪಮಾಲಂಕಾರ**

  ಉಪಮೇಯ: ನಿನ್ನದೊಂದಳವು ( ದ್ರುಪದನ ಸಂಪತ್ತು)

  ಉಪಮಾನ : ನೊಳವಿಂಗೆ ಕುಪ್ಪೆ ವರ (ನೊಣಕ್ಕೆ ತಿಪ್ಪಿಯಂತೆ)

  ವಾಚಕ ಪದ: ವೊಲ್

  ಸಮಾನ ಧರ್ಮ: ತುಚ್ಛ

  ಸಮನ್ವಯ : ಉಪಮೇಯವಾದ ದ್ರುಪದನ ಸಂಪತ್ತನ್ನು ಉಪಮಾನವಾದ ತಿಪ್ಪೆಗೆ ಹೋಲಿಸಿದ್ದರಿಂದ ಇದು ಉಪಮಾಲಂಕಾರ.

---

**ಮಾರಿಗೌತಣವಾಯ್ತು ನಾಳಿನ ಭಾರತವು.**

ಅಲಂಕಾರದ ಹೆಸರು: **ರೂಪಕಲಂಕಾರ**

ಉಪಮೇಯ: ನಾಳಿನ ಭಾರತ

ಉಪಮಾನ : ಮಾರಿಗೌತಣ

ಸಮನ್ವಯ : ಉಪಮೇಯವಾದ  ನಾಳಿನ ಭಾರತಕ್ಕೂ ಉಪಮಾನವಾದ ಮಾರಿಗೌತಣಕ್ಕೂ ಅಬೇಧ ವರ್ಣನೆ ಇರುವುದರಿಂದ ಇದು ರೂಪಕ ಅಲಂಕಾರ.

---

**ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ.**

ಅಲಂಕಾರದ ಹೆಸರು: **ರೂಪಕಲಂಕಾರ**

ಉಪಮೇಯ :  ಒಡಲಬೇಗೆ

ಉಪಮಾನ  :   ಬೆಂಕಿಯುರಿ

ಸಮನ್ವಯ : ಉಪಮೇಯವಾದ  ಒಡಲಬೇಗೆಗೂ  ಉಪಮಾನವಾದ ಬೆಂಕಿಯುರಿಗೂ ಅಬೇಧ ವರ್ಣನೆ ಇರುವುದರಿಂದ ಇದು ರೂಪಕ ಅಲಂಕಾರ.

---

**ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.**

ಅಲಂಕಾರ: **ದೃಷ್ಟಾಂತ ಅಲಂಕಾರ.**

ಉಪಮೇಯ : ಮಾತು ಬಲ್ಲವನಿಗೆ ಜಗಳವಿಲ್ಲ

ಉಪಮಾನ :  ಊಟ ಬಲ್ಲವನಿಗೆ ರೋಗವಿಲ್ಲ

ಸಮನ್ವಯ : ಉಪಮೇಯವಾದ  ಮಾತು ಬಲ್ಲವನಿಗೆ ಜಗಳವಿಲ್ಲ ಉಪಮಾನವಾದ ಊಟ ಬಲ್ಲವನಿಗೆ ರೋಗವಿಲ್ಲ ಇವುಗಳ ಮಧ್ಯ ಬಿಂಬ ಪ್ರತಿಬಿಂಬ ಭಾವ ಇರುವುದರಿಂದ ಇದು ದೃಷ್ಟಾಂತ ಅಲಂಕಾರ.

**ಅಚ್ಛೋದ ಸರೋವರವು ತ್ರೈಲೋಕ್ಯ ಲಕ್ಷ್ಮೀಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.**

**ಉತ್ಪ್ರೇಕ್ಷಾಲಂಕಾರ**

ಉಪಮೇಯ : ಅಚ್ಛೋದ ಸರೋವರ

ಉಪಮಾನ : ರನ್ನಗನ್ನಡಿ

ಸಮನ್ವಯ : ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಕಲ್ಪಿಸಿರುವುದರಿಂದ ಇದು ಉತ್ಪ್ರೇಕ್ಷ ಅಲಂಕಾರ.

---

**ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?**

**ಅರ್ಥಾಂತರನ್ಯಾಸ ಅಲಂಕಾರ**

ಉಪಮೇಯ : ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು

ಉಪಮಾನ : ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

ಸಮನ್ವಯ : ಉಪಮೇಯವಾದ ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು ಎಂಬ ವಿಶೇಷ ವಾಕ್ಯವನ್ನು ಉಪಮಾನವಾದ ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ? ಎಂಬ ಸಾಮಾನ್ಯ ವಾಕ್ಯದಿಂದ ಸಮರ್ಥಿಸಿರುವುದರಿಂದ ಇದು ಅರ್ಥಾಂತರನ್ಯಾಸ ಅಲಂಕಾರ.

ಎಂಬುದಾಗಿ ಕಲ್ಪಿಸಿರುವುದರಿಂದ ಇದು ಉತ್ಪ್ರೇಕ್ಷ ಅಲಂಕಾರ.

---

**ಮೂರು- ನಾಲ್ಕು ವಾಕ್ಯದ ಪ್ರಶ್ನೋತ್ತರಗಳು**

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. (ಎರಡು ಅಂಕದ ಸುಲಭ ಹಾಗೂ ನೆನಪಿನಲ್ಲಿ ಇಟ್ಟುಕೊಳ್ಳಬಹುದಾದ ಕಿರು ಉತ್ತರಗಳು )**

1. ಹುಲಿಯು ಹಿಂದಿನಿಂದ ಹಾರಿಕೊಲ್ಲದಿರಲು ಕಾರಣವೇನು?

ಉತ್ತರ: ಶ್ರೀ ರಾಮನಂತ ದೊರೆಗಳು ಆಳಿದ, ಭಗವದ್ಗೀತೆಯಂತ ಗ್ರಂಥ ಉದ್ಭವಿಸಿದ ಭರತ ಭೂಮಿಯಲ್ಲಿನ ಹುಲಿಗಳು ಶತ್ರುವನ್ನಾದರೂ ಸರಿಯೇ ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ ಎಂದು ಹುಲಿ ಅಭಿಪ್ರಾಯ.

2. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?

ಉತ್ತರ: 1.ಗ್ರಾಮನೈರ್ಮಲೀಕರಣ 2.ವೈದ್ಯಕೀಯ ಸಹಾಯ 3.ವಿದ್ಯಾ ಪ್ರಚಾರ 4.ನೀರಿನ ಸೌಕರ್ಯ 5.ಪ್ರಯಾಣ ಸೌಲಭ್ಯ

3. ಹಕ್ಕಿಯು ಯಾವ ಮೇಲೆ ಮೀರಿ ನೀರನ್ನು ಹೀರಿದೆ?

ಉತ್ತರ: ಹಕ್ಕಿಯು ಶುಕ್ರ ಗ್ರಹದ ಎಲ್ಲೆಯನ್ನು ಮೀರಿ ಹಾರಿದೆ. ಚಂದ್ರನೂರಿನ ನೀರನ್ನು ಹೀರಿದೆ. ಮಂಗಳಲೋಕದ ಅಂಗಳಕೇರಿದೆ. ಶುಕ್ರಗ್ರಹ ಮನುಷ್ಯನ ಕೇವಲ ಹಳ್ಳಿಯಾಗಬಹುದು. ಚಂದ್ರಲೋಕ ಊರಾಗಬಹುದು. ಮಂಗಳ ಲೋಕ ಭೂಮಿಗೆ ಅಂಗಳವಾಗಬಹುದು ಹೀಗೆ ಮಾನವನಿಗೆ ಆಕಾಶಕಾಯಗಳು ಆಡಲು ಹಾಡಲು ಹಾಗೂ ಹಾರಾಡಲು ಆಗಬಹುದೇ ಎಂದು ಕವಿ ಹೇಳಿದ್ದಾರೆ.

4. ಕೃಷ್ಣನ ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು.

ಉತ್ತರ: ಕರ್ಣ ಕೌರವರು ಯಾದವರಿಗೆ ಭೇದವಿಲ್ಲ, ವಿಚಾರಿಸಿದರೆ ಇಬ್ಬರೂ ಒಂದೇ ವಂಶದವರು. ನಿನ್ನಾಣೆಯಾಗಿಯೂ ನೀನೇ ರಾಜ ಆದರೆ ನಿನಗೆ ಅದರ ಅರಿವಿಲ್ಲ ಎಂದು ಭಯವನ್ನು ಬಿತ್ತಿದನು.

5. ಕುಂತಿ ಮಾದ್ರಿಯರು ಯಾರ ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?

ಉತ್ತರ: ಸೂರ್ಯನ ಅನುಗ್ರಹದಿಂದ- ಕರ್ಣ, ಯಮದೇವನ ಅನುಗ್ರಹದಿಂದ ಧರ್ಮರಾಯ, ವಾಯುದೇವನ ಅನುಗ್ರಹದಿಂದ - ಭೀಮ, ಇಂದ್ರನ ಅನುಗ್ರಹದಿಂದ - ಅರ್ಜುನ, ಅಶ್ವಿನಿ ದೇವತೆಯ ಅನುಗ್ರಹದಿಂದ - ನಕುಲ ಸಹದೇವರು.

6. ಈ ನೆಲದೊಡನೆ ತಾನು ಸಹ ಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದಕೆ?

ಉತ್ತರ: ತನ್ನ ಪ್ರೀತಿಯ ಸಹೋದರ ಮತ್ತು ಸ್ನೇಹಿತ ಕರ್ಣನನ್ನು ಕಳೆದುಕೊಂಡ ದುರ್ಯೋಧನನಿಗೆ ಆ ಭೂಮಿ. ಹಾಳು ಭೂಮಿ ಕರ್ಣನನ್ನು ಕೊಲ್ಲಿಸಿದ ಭೂಮಿಯೊಡನೆ ಮತ್ತೆ ತಾನು ಸಹ ಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳಿದ್ದಾನೆ.

7. ಪಾರ್ಥಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?

ಉತ್ತರ: ನನ್ನ ಪ್ರೀತಿಯ ಸ್ನೇಹಿತ ಕರ್ಣ ಹಾಗೂ ತಮ್ಮ ದುಶ್ಯಾಸನನನ್ನು ಕೊಂದ ಭೀಮ-ಅರ್ಜುನರು ಜೀವಂತ ಇರುವರೆಗೂ ನಾನು ಸಂಧಿಗೆ ಒಪ್ಪಲಾರೆನು. ಮೊದಲು ಆ ಇಬ್ಬರನ್ನು ಕೊಲ್ಲುವೆನು ಹಾಗೆ ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುವೆನು ಎಂದು ದುರ್ಯೋಧನನು ಅಭಿಪ್ರಾಯ ಪಡುತ್ತಾನೆ.

8. ಯಾರಿಗೆ ವಸಂತ ಮುಖ ತೋರಲಿಲ್ಲ?

ಉತ್ತರ: ಕಮ್ಮಾರ, ಕುಂಬಾರ, ನೇಕಾರ, ಕೇರಿಯ ಮಾರ ಇವರಾರಿಗೂ ವಸಂತ ಮುಖ ತೋರಲಿಲ್ಲ.

9. ಪುಟ್ಟಿಯ ಪ್ರಶ್ನೆಗಳೇನು?

ಉತ್ತರ: ಗುಡಿಸಲೊಳಗೆ ಬರಲು ವಸಂತ ಹೆದರಿದರನೆ? ಹರಿದ ಚಿಂದಿಯ ಬಟ್ಟೆಗಳನ್ನು ಕಂಡು ಅವನು ಮರುಗಿದನೆ? ಎನ್ನುವುದು ಪುಟ್ಟಿಯ ಪ್ರಶ್ನೆಗಳು.

10. ವಸಂತ ಮುಖ ತೋರಿಸಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

ಉತ್ತರ: ಹಸಿರು ತುಂಬಿ ನಿಂತ ಮಾವಿನ ಮರಗಳು, ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳು, ಮನದುಂಬಿ ಹಾಡುವ ಕೋಗಿಲೆಗಳು, ಕಡಲುಕ್ಕಿ ಹರಿಯುವ ಭೂಮಿ ಎಂದು ಕವಿಯತ್ರಿ ಪ್ರಕೃತಿ ಸಂಭ್ರಮವನ್ನು ಬಣ್ಣಿಸಿದ್ದಾರೆ.

11. ಭಗತ್ ಸಿಂಗ್ ಜಲಿಯನ್ ವಾಲಾಬಾಗ್ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ?

ಉತ್ತರ: "ಇದು ಬಹಳ ಪೂಜ್ಯನೀಯವಾದ ಮಣ್ಣು ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ" ಎಂದು ತನ್ನ ತಂಗಿಗೆ ಹೇಳುತ್ತಾನೆ.

12. ಡಾಕ್ಟರ್ ವಿಮಾನದ ಪೈಲೆಟ್ ಏನು ಹೇಳಿದನು?

ಉತ್ತರ: ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನು ಕಾಣಿಸ್ತಾ ಇಲ್ಲವಲ್ಲ ಎಂದು ವಿಮಾನದ ಪೈಲೆಟ್ ಡಾಕ್ಟರ್ ಗೆ ಹೇಳಿದನು.

13. ಮಹಿಳೆಯ ಅರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳು ಯಾವವು?

ಉತ್ತರ: ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಪದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು?

14. ಮುದುಕಿಯು ರೈಲಿನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?

ಉತ್ತರ: ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು, ಮದುವೆಯಾಗಿ ಈ ಊರಲ್ಲಿ ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು ಆಸ್ತಿ ನಮಗೆ ಸಾಕಾಗುವಷ್ಟು ಇತ್ತು. ಈಗಲೂ ಇದೆ. ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ ಯುದ್ಧವಂತೆ ಯುದ್ಧ ಎಂದು ಮುದುಕಿ ಹೇಳಿದಳು.

15. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಸೆಯಿಂದ ಹೇಳಿದ್ದೇನೆ?

ಉತ್ತರ: ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲ್ಲಿಲ್ಲವಲ್ಲ ? ಈ ಯುದ್ಧ ಇಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆ. ದೇವರೇ ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತೀಯಾ? ಎಂದು ಮುದುಕಿ ನಿರಾಸೆಯಿಂದ ಹೇಳಿದಳು.

16. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?

ಉತ್ತರ: ತಾಳಿಕೋ ಅಣ್ಣ ತಾಳಿಕೋ ! ಸೂರ್ಯನೇ ತೇಜಗೆಡೆಯ ತೇಜಕೆಡೆಯಾರು ? ರಾಮನೇ ಧೈರ್ಯಗೆಡೆ ಸ್ಥೈರ್ಯಕೆಡೆ ಯಾರು? ಚಿತ್ರಕೂಟದಲ್ಲಿದ್ದ ಸಂದರ್ಭದಲ್ಲಿ ನಾನು ಆಕೆಯನ್ನು ಒಂಟಿಯಾಗಿ ಬಿಟ್ಟು ಹೋಗಿದ್ದರಿಂದ ಈ ಗತಿ ಒದಗಿತು. ನಾನು ಹಾಗೆ ಮಾಡಬಾರದಿತ್ತು. ಎಂದು ಲಕ್ಷ್ಮಣನು ರಾಮನನ್ನು ಸಂತೈಸಿದನು.

17. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

ಉತ್ತರ: ಶಬರಿ ಪ್ರತಿದಿನ ರಾಮನ ಬರುವನೆಂದು ಅವನಿಗೆ ಒಳ್ಳೆಯ ಸಿಹಿಯಾದ ಹಣ್ಣುಗಳನ್ನು ಆಯ್ದು ತರುವಳು. ಹೂವುಗಳನ್ನು ಹುಡುಕಿ ತಂದು ರಾಮನಿಗೆ ಮಾಲೆಯನ್ನು ಸಿದ್ಧಪಡಿಸುವಳು. ಮಧುಪರ್ಕವನ್ನು ರಾಮನಿಗಾಗಿ ಅಣಿಗೊಳಿಸುವಳು ಹೀಗೆ ಚಿಂತಿಸುತ್ತ ಶ್ರೀರಾಮನಿಗೆ ಅರ್ಪಿಸಲು ಪ್ರತಿದಿನ ಹೊಸತನವನ್ನು ಆಯ್ದು ತರುವಳು.

18. ವುಲವರ್ಥ್ ಅಂಗಡಿಯಲ್ಲಿ ಸಿಗುವ ವಸ್ತುಗಳು ಯಾವುವು?

ಉತ್ತರ: ಬೂಟು, ಕಾಲು ಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡಿಗೆ ಪಾತ್ರೆ , ಎಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿಗಳು ಅಲ್ಲದೇ ಎಲ್ಲಾ ತರಹದ ಸಾಮಾನುಗಳನ್ನು ಮಾಡುತ್ತಾರೆ.

19. ಒಪ್ಪಿಗೆ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?

ಉತ್ತರ: ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ, ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆ ಅಲ್ಲವೇ? ಒಬ್ಬ ಮನುಷ್ಯನಂತೆ ಇನ್ನೊಬ್ಬಳರಿಲ್ಲ ಎಂದು ಲೇಖಕರು ಟೊಪ್ಪಿಗೆಯ ವಿಶೇಷತೆ ಕುರಿತು ಹೇಳಿದ್ದಾರೆ.

20. ಪೊಯಟ್ ಕಾರ್ನರ್ ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?

ಉತ್ತರ: ಕಿಪ್ಲಿಲಿಂಗ್ ಮೇಕಾಲೆ, ಗೋಲ್ಡ್ ಸ್ಮೀತ್, ಜಾನ್ಸನ್ .

21. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸಿರು ಕಾಣುತ್ತಿದೆ?

ಉತ್ತರ: ಆಕಾಶ, ಗದ್ದೆ, ಬಯಲು, ಮಲೆ, ಕಣಿವೆ, ಸಂಜೆಯ ಬಿಸಿಲು ಕೂಡ ಕವಿಗೆ ಹಸಿರಾಗಿ ಕಾಣುತ್ತದೆ.

22. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?

ಉತ್ತರ: ಕಂಪನಿ ಸರ್ಕಾರ ಎಲ್ಲಾ ಭಾರತೀಯರ ಬಳಿ ಇರುವ ಆಯುಧಗಳನ್ನು ಕುಸಿದುಕೊಳ್ಳುವಂತೆ ಆದೇಶ ನೀಡಿತು . ಹಲಗಲಿ ಬೇಡರು ಇದನ್ನು ವಿರೋಧಿಸಿದರಿಂದ್ದ ದಂಗೆ ಎದ್ದಿತು.

23. ಹಲಗಲಿಗೆ ದಂಡು ಬರಲು ಕಾರಣವೇನು?

ಉತ್ತರ: ನಿಶಸ್ತ್ರೀಕರಣ ಕಾಯ್ದೆಯನ್ನು ವಿರೋಧಿಸಿ ಹಲಗಲಿ ಬೇಡರು ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು. ಆಯುಧ ಕೇಳಲು ಬಂದ ಸಿಪಾಯಿಗಳ ಕೆನ್ನೆಗೆ ಬಾರಿಸಿದರು. ಈ ವಿಷಯ ತಿಳಿದ ಕಂಪನಿ ಅಧಿಕಾರಿಯ ಕೆಲವು ಜನರನ್ನು ಕಳಿಸಿದಾಗ ಅವರನ್ನು ಬೇಡರು ಹಿಮ್ಮೆಟ್ಟಿಸಿದರಿಂದ.

24. ಲಾವಣಿಗಳನ್ನು ಏಕೆ ವೀರ ಗೀತೆಗಳನ್ನು ಕರೆಯಲಾಗಿದೆ?

ಉತ್ತರ: ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ತ್ಯಾಗ ಬಲಿದಾನಗಳಿಂದ ಅಮರರಾದ ವೀರಕಲಿಗಳ ವೀರ ಸಾಹಸ ಉಜ್ವಲ ಜೀವನವನ್ನು ಲಾವಣಿಗಳಲ್ಲಿ ವರ್ಣಿಸುವುದರಿಂದ.

25. ದಂಡು ಹಲಗಲಿ ಮೇಲೆ ಹೇಗೆ ದಾಳಿ ನಡೆಸಿತು?

ಉತ್ತರ: ಹೆಬಲಕ್ ಅಧಿಕಾರಿಯನ್ನು ಕೊಂದ ಬಳಿಕ ಕೋಪಗೊಂಡ ಕಾರ ಸಾಹೇಬ ಊರನ್ನು ಲೂಟಿ ಮಾಡುವಂತೆ ಆದೇಶಿಸಿದನು. ಕಂಡ ಕಂಡಲ್ಲಿ ಬೇಡದ ಹತ್ಯೆಗೆಯಲಾಯಿತು. ರಕ್ತದ ಹೊಳೆ ಹರಿಯಿತು. ಹಲಗಲಿಗೆ ಬೆಂಕಿ ಇಟ್ಟು ಇಡಿ ಊರನ್ನೇ ಬೂದಿ ಮಾಡಲಾಯಿತು.

26. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?

ಉತ್ತರ: ಈ ಭೂಮಿಯಲ್ಲಿ ಕೌಶಲ್ಯೆಯು ಪಡೆದ ಮಗನಾದ ಶ್ರೀರಾಮನ್ನೇ ಶ್ರೀರಾಮನೊಬ್ಬನೇ ವೀರ. ಅವರ ಯಜ್ಞತುರ್ಗವಿದು. ಇದನ್ನು ಧರಿಸುವ ಸಮರ್ಥರು ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಿರಿ ಎಂದು ಬರೆಯಲಾಗಿತ್ತು.

27. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?

ಉತ್ತರ: ಪರಶುರಾಮನ ಬಳಿ ಚಿನ್ನದ ಪಾತ್ರೆಗಳಿಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

28. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?

ಉತ್ತರ: ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ . ನೀನು ನನ್ನನ್ನು ಆದಲ್ಲಿ ಕಂಡಿದ್ದೆಯೋ ? ರಾಜನಿಗೂ ಬ್ರಾಹ್ಮಣರಿಗೂ ಯಾವ ವಿಧವಾದ ಸ್ನೇಹ? ಮನುಷ್ಯರಾದವರು ಎಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ? ಎಂದು ಹೀಯಾಳಿಸಿದನು.

## ಪಠ್ಯ ಪೂರಕ ಭಾಗ

**(ಪಠ್ಯ ಪೂರಕ ಭಾಗದಿಂದ ಒಟ್ಟು 4 ಮೂರು – ನಾಲ್ಕು ವಾಕ್ಯದ ಪ್ರಶ್ನೆಗಳು ಬರುತ್ತವೆ. 8 ಅಂಕಗಳನ್ನು ಗಳಿಸಬಹುದು)**

1. ಪುಟ್ಟಿಯ ಪ್ರಶ್ನೆಗಳೇನು?

ಉತ್ತರ: ವಸಂತನು ಗುಡಿಸಲೊಳಗೆ ಬರಲು ಹೆದರಿದನೇ? ಹರಿದ ಚಿಂದಿ ಬಟ್ಟೆಗಳ ಕಂಡು ಮರುಗಿದನೆ? ಎಂದು ಪುಟ್ಟ ಪೋರಿಯು ಪ್ರಶ್ನಿಸಿಕೊಳ್ಳುತ್ತಾಳೆ.

2. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

ಉತ್ತರ: ಒಡೆಯನ ಅಂಗಳದಲ್ಲಿ ಮೈತುಂಬಿನಿಂತ ಮಾವಿನ ಮರಗಳು, ರೆಕ್ಕೆ ಬಿಚ್ಚಿ ಹಾರುವ ಹಕ್ಕಿಗಳು ,ಮನದುಂಬಿ ಹಾಡುವ ಕೋಗಿಲೆಗಳು, ಕಡಲುಕ್ಕಿ ಹರಿಯುವ ಸಂಭ್ರಮ ಇಳೆಗೆ.ಈ ರೀತಿಯ ಪ್ರಕೃತಿ ಸಂಭ್ರಮ ಕಂಡು ಬರುತ್ತದೆ.

3. ಭಗತ್ ಸಿಂಗ್, ಜನಿಯನ್ ವಾಲಾಬಾಗ್ ನ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳುತ್ತಾನೆ?

ಉತ್ತರ: ಭಗತ್ ಸಿಂಗ್, ಜನಿಯನ್ ವಾಲಾಬಾಗ್ ನ ಮಣ್ಣಿನ ಕುರಿತು ತನ್ನ ತಂಗಿಗೆ " ಇದು ಬಹಳ ಪೂಜ್ಯನೀಯವಾದ ಮಣ್ಣು ಜನಿಯನ್ ವಾಲಾಬಾಗ್ ದಲ್ಲಿ ಹುತಾತ್ಮರಾದ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ".ಎಂದು ಹೇಳೀದನು.

4. ಭಗತ್ ಸಿಂಗ್ ಜಲಿಯನ್ ವಾಲಾಬಾಗ್ ಮಾರಣ ಹೋಮದಿಂದ ತೆಗೆದುಕೊಂಡ ನಿರ್ಧಾರವೇನು?

ಉತ್ತರ: 1921 ರಲ್ಲಿ ಭಗತ್ ಸಿಂಗ್ ಒಂದು ನಿರ್ಧಾರಕ್ಕೆ ಬಂದ. ಒಂದಲ್ಲ ಒಂದು ದಿನ ದಮನಕಾರಿ ಪ್ರಭುತ್ವವನ್ನು ಧ್ವಂಸ ಮಾಡಲು ಏನನ್ನಾದರೂ ಮಾಡಿಯಾ ತೀರುತ್ತೇನೆಂದೂ,ಆಗ ಕ್ರೂರ ಬ್ರಿಟೀಷರ ಆಳ್ವಿಕೆ ಅಂತ್ಯವಾಗುತ್ತದೆ ಎಂದಿದ್ದ

5. ಕ್ರಿಯಾ ಸ್ವಾತಂತ್ರ್ಯ ಎಂದರೇನು?

ಉತ್ತರ: ಕ್ರಿಯಾ ಸ್ವಾತಂತ್ರ್ಯ ಎಂದರೆ ತನಗೆ ಇಷ್ಟ ಬಂದ ಕೆಲಸವನ್ನು ಮಾಡಲು ವ್ಯಕ್ತಿಗೆ ಇರುವ ಅವಕಾಶವಿರುವುದು.ಅದು ಔಪಚಾರಿಕವಾಗಿದ್ದರೆ ಸಾಲದು, ವಾಸ್ತವಿಕವಾಗಿ ಕೂಡ ಜಾರಿಯಲ್ಲಿರಬೇಕು. ಅದು ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು.

6. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?

ಉತ್ತರ: ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವವೇ ಸರಿ. ಏಕೆಂದರೆ ರಾಜಕೀಯವಾದ ಸಮಸ್ತ ಅಧಿಕಾರವು ಜನತೆಯಿಂದ ಬರುತ್ತದೆ.

7. ಅಂದವಾದ ಬರವಣಿಗೆ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು.?

ಉತ್ತರ: ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

8. ಅನ್ ಟು ದಿಸ್ ಲಾಸ್ಟ್ ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮವನ್ನು ಬಿರಿತು?

ಉತ್ತರ: ಎಲ್ಲರ ಒಳ್ಳೆಯದರಲ್ಲಿ ನಮ್ಮ ಒಳ್ಳೆಯದು ಅಡಗಿದೆ. ವಕೀಲನ ಕೆಲಸಕ್ಕೆ ಇರುವ ಬೆಲೆ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ. ಶ್ರಮಜೀವಿಯ ಜೀವನ, ಉಳುವವನ ಅಥವಾ ಕೈ ಕಸಬುಗಾರನ ಜೀವನವೇ ಯೋಗ್ಯ ಜೀವನ ಎಂದು ಗಾಂಧೀಜಿ ಅವರಿಗೆ ಅರಿವಾಯಿತು.

9. ಬಾಳಿನಲ್ಲಿ ತೃಪ್ತಿ ದೊರೆಯಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?

ಉತ್ತರ: ನಮ್ಮ ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಿ, ವೇದಾಂತದ ಸಂದೇಶವನ್ನ ಪ್ರತಿ ಮನೆಗೂ ಸಾರಿ. ಪ್ರತಿಯೊಂದು ಆತ್ಮದಲ್ಲಿರುವ ಸೂಕ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ ಅನಂತರ ನಾವು ಎಷ್ಟೇ ಅಲ್ಪವನ್ನು ಸಾಧಿಸಿದ್ದರು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಿದ್ದೇವೆ ಎಂಬ ತೃಪ್ತಿ ಇರುತ್ತದೆ.

10. ಜ್ಞಾನಿ ಅಜ್ಞಾನಿಗಳ ಸಂ ಬಗೆಗಿನ ಅಕ್ಕಮಹಾದೇವಿಯ ಅಭಿಪ್ರಾಯವೇನು?

ಉತ್ತರ: ಅಜ್ಞಾನಿಯ ಸಂಗವನ್ನು ಮಾಡಿದರೆ ಕಲ್ಲು ಹೊಯ್ದು ಕಿಡಿಯ ತೆಗೆದುಕೊಂಡಂತೆ ಆಗುವುದು, ಜ್ಞಾನಿಯ ಸಂಗವನ್ನು ಮಾಡಿದರೆ ಮೊಸರನ್ನ ಕಡಿದು ಬೆನ್ನೆಯನ್ನು ತೆಗೆದಂತಾಗುವುದು ಚೆನ್ನಮಲ್ಲಿಕಾರ್ಜುನನ ಶರಣರ ಸಂಗವನ್ನು ಮಾಡಿದರೆ ಕರ್ಪೂರದ ಗಿರಿಯನು ಉರಿಯಕೊಂಬಂತಾಗುವುದು ಎಂದಿದ್ದಾಳೆ.

29. ಪೈಗಳ ತಮ್ಮನ ನೂಲು ಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?

ಉತ್ತರ: ಚಪ್ಪರ ಹಾಕಿದ್ದರು ಚಪ್ಪರದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಿದ್ದರು. ಮತ್ತೊಂದು ಕಡೆಯಲ್ಲಿ ಮಂಡಿಗೆಗಳನ್ನು ಮಡಚುತ್ತಿದ್ದರು. ಬೇರೊಂದು ಕಡೆ ಸೇವಿಗೆಯನ್ನು ಒತ್ತುತಿದ್ದರು. ಜೋಳದ ಗದ್ದೆಯಲ್ಲಿ ಗಿಳಿಗಳ ಕೊಲಾಹಲದಂತೆ ಗದ್ದಲ.

30. ಹಾಡು ಕಿವಿಗೆ ಬಿದ್ದಾಗ ಪೈಗಳು ಏನು ಮಾಡಿದರು?

ಉತ್ತರ: ನೆಟ್ಟಗೆ ಹೋದವರು ಅಭ್ಯಾಸದ ಪುಸ್ತಕವನ್ನು ಹಿಡಿದರು. ಬರೆಯತೊಡಗಿದರು. ಏಕಾಂಕ ನಾಟಕ ಎನ್ನಬಹುದಾದ ನಾಟಕವನ್ನು ಬರೆದು ಮುಗಿಸಿದರು.

31. ಬಾಸೆಲ್ ಮಿಷನ್ ರವರು ಪ್ರಕಟಿಸಿದ್ದ ಯಾವ ಕೃತಿಗಳನ್ನು ಲೇಖಕರು ಓದಿಕೊಂಡರು?

ಉತ್ತರ: ಕನ್ನಡ ಜೈಮಿನಿ ಭಾರತ ಗದುಗಿನ ಭಾರತ, ಗದುಗಿನ ಭಾರತ, ಶಬರ ಶಂಕರ ವಿಲಾಸವೇ ಮೊದಲಾದ ಮಹಾಕಾವ್ಯವು ಲೇಖಕರು ಓದಿದರು.

32. ಗುರೂಪದೇಶದ ಗುಣಗಳನ್ನು ಪಟ್ಟಿ ಮಾಡಿ?

ಉತ್ತರ: ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ ಮೀಹ. ತಲೆ ನೆರೆಯದೆ ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು, ಬೊಜ್ಜು ಬೆಳೆಯದೆ ಬರುವ ಗುರುತ್ವ, ಬಂಗಾರವಿಲ್ಲದೆ ಮಾಡಿದ ಬೆಲೆಬಾಳುವ ಕಿವಿಯೋಲೆ, ಪಂಜು ಇಲ್ಲದೆ ಬೆಳಗುವ ಬೆಳಗು, ಉದ್ವೇಗ ಬರಿಸದ ಜಾಗರಣೆ.

33. ರಾಜರ ಪ್ರಕೃತಿ ಹೇಗಿರುತ್ತದೆ?

ಉತ್ತರ: ಅಹಂಕಾರದ ದಾಹಜ್ವರ, ಕತ್ತಲು ತುಂಬಿರುತ್ತದೆ. ದುಡ್ಡಿನ ಪೈಥ್ಯ ಆಡರಿದವರಿಗೆ ಜಗತ್ತಲ್ಲ ಕ್ಷುದ್ರವಾಗಿ ಕಾಣುತ್ತದೆ, ರಾಜ್ಯ ಎನ್ನುವುದು ಒಂದು ವಿಷ. ಅಧಿಕಾರದ ಸೋಂಕು ತಾಗಿದವರಿಗೆಲ್ಲ ಬುದ್ಧಿಮಂತಾಗಿ ಬಿಡುತ್ತದೆ.

34. ಗುರೂಪದೇಶವು ಯಾರಿಗೆ ಮೆಚ್ಚುಕೆಯಾಗುವುದಿಲ್ಲ?

ಉತ್ತರ: ಗುರುವಾಣಿ ಎಷ್ಟು ಪರಿಶುದ್ಧವಾಗಿದ್ದರೂ ಮೂರ್ಖನ ಕಿವಿಗೆ ಅದು ಒಂದು ಹೊರೆ. ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು ಅಹಂಕಾರದಿಂದ ಅವರ ಕಿವಿ ಕಿವುಡಾಗಿ ಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ.

## **ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ**

### ಗದ್ಯ ಪಾಠ 1 ನಮ್ಮ ಭಾಷೆ

-ಕವಿ ಎಂ ಮರಿಯಪ್ಪ ಭಟ್

ಮಾದರಿ ಸಂದರ್ಭ

**1. "ಸಂಸ್ಕೃತಿಯ ಇತಿಹಾಸ ಉಳಿಯಿತು."**

ಆಯ್ಕೆ: ಈ ಮೇಲಿನ ವಾಕ್ಯವನ್ನು ಎಂ ಮರಿಯಪ್ಪ ಭಟ್ಟರು ಬರೆದಿರುವ ನಮ್ಮ ಭಾಷೆ ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಮಾನವನಿಗೆ ಬಿಡುವು ಹೆಚ್ಚಿದಂತೆ ಜೀವನದ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳುತ ತನ್ನ ಜೀವನದ ಆಗುಹೋಗುಗಳನ್ನು ಸುಖ ದುಃಖಗಳನ್ನು ಕಾವ್ಯರೂಪಕ್ಕೆ ಇಳಿಸಿ ತೊಡಗಿದಾಗ ಸಾಹಿತ್ಯ ವಿವಿಧ ರೂಪದಲ್ಲಿ ಬೆಳೆದಿರಬಹುದು.ಸಾಹಿತ್ಯಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡ. ಲಿಪಿಯ ಮೂಲಕ ಪರಂಪರೆಯಿಂದ ಬಂದ ಎಷ್ಟೋ ವಿಷಯಗಳನ್ನು ಬರೆದಿಡಲು ಸಾಧ್ಯವಾಗಿ ಜ್ಞಾನ ಭಂಡಾರ ಭದ್ರವಾಯಿತು ಎಂದು ಹೇಳುವಾಗ ಲೇಖಕರು ಈ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ: ಮಾನವ ಈ ರೀತಿ ಬರೆದಿಡುವುದಲ್ಲದೆ ತನ್ನ ಜ್ಞಾನವನ್ನು ಭದ್ರಪಡಿಸಿಕೊಂಡನು.ಆಗ ನಮ್ಮ ಸಂಸ್ಕೃತಿಯ ಇತಿಹಾಸವನ್ನು ಉಳಿಯಿತು ಮತ್ತು ಪ್ರಗತಿಪತವನ್ನು ಸುಗಮವಾಯಿತು ಎಂಬುದು ಇಲ್ಲಿ ಸ್ವಾರಸ್ಯಕರವಾಗಿದೆ.

(ಈ ಮೇಲಿನ ಸಂದರ್ಭದಲ್ಲಿ ಆಯ್ಕೆಸಂದರ್ಭ ಮತ್ತು ಸ್ವಾರಸ್ಯ ಇವುಗಳಿಗೆ ತಲಾ ಒಂದು ಅಂಕ ಇರುವುದರಿಂದ ಇಲ್ಲಿ ಮೂರು ಅಂಕ ಸರಳವಾಗಿ ಪಡೆಯಬಹುದು.ಹೀಗೆ ಆರು ಸಂದರ್ಭದಿಂದ ಆರು ಆಯ್ಕೆಗಳನ್ನು ಬರೆದು ಆರು ಅಂಕ ಪಡೆಯಲು ತುಂಬಾ ಉಪಯುಕ್ತ. ಆದರೆ ಯಾವ ಕವಿ ಯಾವ ಪಾಠ ಎಂಬುದು ಗೊತ್ತಿರಬೇಕು.)

### **ಸಂದರ್ಭ ಬರೆಯುವ ಮಾದರಿ**

**ಆಯ್ಕೆ :** ಈ ಮೇಲಿನ ವಾಕ್ಯವನ್ನು ____________________ ಅವರು ಬರೆದಿರುವ _________________ ಎಂಬ ಆಕರ ಕೃತಿಯಿಂದ ಆರಿಸಿದ ____________________ಗದ್ಯ / ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. **(1 ಅಂಕ)**

**ಸಂದರ್ಭ:** ಈ ವಾಕ್ಯವನ್ನು _________________ರವರು___________________ನಿಗೆ________________________ ಸಂದರ್ಭದಲ್ಲಿ ಹೇಳಿದ್ದಾರೆ.

**ಸ್ವಾರಸ್ಯ:** ಈ ಮೇಲಿನ ವಾಕ್ಯವು __________________ನ್ನು ತಿಳಿಸಿಕೊಡುತ್ತದೆ.

## ಸಂದರ್ಭಗಳ ಪಟ್ಟಿ

| ಕ್ರ. ಸಂ | ವಾಕ್ಯ/ಸಾಲು | ಪಾಠ | ಆಕರ ಕೃತಿ | ಲೇಖಕ/ಕವಿ | ಯಾರು | ಯಾರಿಗೆ |
|---|---|---|---|---|---|---|
| 1 | ಸಂಸ್ಕೃತಿಯ ಇತಿಹಾಸ ಉಳಿಯಿತು | ನಮ್ಮಭಾಷೆ | ಕನ್ನಡ ಸಂಸ್ಕೃತಿ | ಎಂ.ಮರಿಯಪ್ಪ ಭಟ್ಟ | ಲೇಖಕರು | |
| 2 | ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ | ನಮ್ಮಭಾಷೆ | ಕನ್ನಡ ಸಂಸ್ಕೃತಿ | ಎಂ.ಮರಿಯಪ್ಪ ಭಟ್ಟ | ನಯಸೇನ | |
| 3 | ಸಿಗುರು ತೆಗೆದ ಕಬ್ಬಿನಂತೆ ಉಷ್ಣ ಅಳಿದ ಹಾಲಿನಂತೆ | ನಮ್ಮಭಾಷೆ | ಕನ್ನಡ ಸಂಸ್ಕೃತಿ | ಎಂ.ಮರಿಯಪ್ಪ ಭಟ್ಟ | ಮಹಲಿಂಗರಂಗ | |
| 4 | ಒಬ್ಬ ತಾಯಿಯ ಗಾಣದ ಶೃತಿಯಂತೆ | ನಮ್ಮಭಾಷೆ | ಕನ್ನಡ ಸಂಸ್ಕೃತಿ | ಎಂ.ಮರಿಯಪ್ಪ ಭಟ್ಟ | ಲೇಖಕರು | |
| 5 | ಖಂಡವಿದೆಕೋ ಮಾಂಸವಿದೆಕೋ ಗುಂಡಿಗೆಯ ಬಿಸಿ ರಕ್ತವಿದೆಕೋ | ವ್ಯಾಘ್ರಗೀತೆ | ಸಮಗ್ರ ಲಲಿತ ಪ್ರಬಂಧಗಳು | ಎ.ಎನ್.ಮೂರ್ತಿ ರಾವ್ | ಲೇಖಕರು | |
| 6 | ದೇವರೆ ಮರ ಹತ್ತುವಷ್ಟು ಅವಕಾಶ ಕರುಣಿಸು | ವ್ಯಾಘ್ರಗೀತೆ | ಸಮಗ್ರ ಲಲಿತ ಪ್ರಬಂಧಗಳು | ಎ.ಎನ್.ಮೂರ್ತಿ ರಾವ್ | ಶಾನುಭೋಗರು | |
| 7 | ನಾನು ಮುಖ ಮೇಲಾಗಿ ಬಿದ್ದಿದ್ದೇನೆ? | ವ್ಯಾಘ್ರಗೀತೆ | ಸಮಗ್ರ ಲಲಿತ ಪ್ರಬಂಧಗಳು | ಎ.ಎನ್.ಮೂರ್ತಿ ರಾವ್ | ಶಾನುಭೋಗರು | |
| 8 | ಹುಲಿ ಈಗ ಎಷ್ಟು ಹಸಿದಿರಬೇಕು | ವ್ಯಾಘ್ರಗೀತೆ | ಸಮಗ್ರ ಲಲಿತ ಪ್ರಬಂಧಗಳು | ಎ.ಎನ್.ಮೂರ್ತಿ ರಾವ್ | ಶಾನುಭೋಗರು | |
| 9 | ಸಾಮಾಜಿಕ ಕಾನೂನುಗಳ ಹರಿಕಾರ | ಭಾಗ್ಯಶಿಲ್ಪಿಗಳು | ದಿವಾನ್ ಸರ್ ಎಂ ವಿಶ್ವೇರಯ್ಯನವರ ಕಾರ್ಯಸಾಧನೆಗಳು | ಡಿ.ಎಸ್.ಜಯಪ್ಪ ಗೌಡ | ಲೇಖಕರು | |
| 10 | ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು | ಭಾಗ್ಯಶಿಲ್ಪಿಗಳು | " | ಡಿ.ಎಸ್.ಜಯಪ್ಪ ಗೌಡ | ಲೇಖಕರು | |
| 11 | ಮೈಸೂರು ಸಂಸ್ಥಾನಕ್ಕೆ ಮಾದರಿ ಮೈಸೂರು ಎಂಬ ಕೀರ್ತಿ ಪ್ರಾಪ್ತವಾಯಿತು | ಭಾಗ್ಯಶಿಲ್ಪಿಗಳು | " | ಡಿ.ಎಸ್.ಜಯಪ್ಪ ಗೌಡ | ಲೇಖಕರು | |
| 12 | ತಾವು ಕಡಿಮೆ ಮಾತನಾಡಿದ್ದೀರಿ ಹೆಚ್ಚು ಕೆಲಸ ಮಾಡಿದ್ದೀರಿ | ಭಾಗ್ಯಶಿಲ್ಪಿಗಳು | " | ಡಿ.ಎಸ್.ಜಯಪ್ಪ ಗೌಡ | ಜವಹರಲಾಲ್ ನೆಹರು | ವಿಶ್ವೇಶ್ವರಯ್ಯ |
| 13 | ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ | ಎದೆಗೆ ಬಿದ್ದ ಅಕ್ಷರ | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ಮನೆ ಮಂಚಮ್ಮ | ಗ್ರಾಮಸ್ಥರಿಗೆ |

| | | | | | | |
|---|---|---|---|---|---|---|
| 14 | ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ | ಎದೆಗೆ ಬಿದ್ದ ಅಕ್ಷರ | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ಅಶೋಕ ಪೈ | |
| 15 | ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು | ಎದೆಗೆ ಬಿದ್ದ ಅಕ್ಷರ | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ಲೇಖಕರು | |
| 16 | ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ | ಎದೆಗೆ ಬಿದ್ದ ಅಕ್ಷರ | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ಲೇಖಕರು | |
| 17 | ಪ್ರೀತಿಯ ಹಣತೆಯ ಹಚ್ಚೋಣ | ಸಂಕಲ್ಪಗೀತೆ | ಎದೆ ತುಂಬಿ ಹಾಡಿದೆನು | ಜಿ.ಎಸ್.ಶಿವರುದ್ರಪ್ಪ | ಕವಿ | ಓದುಗರಿಗೆ |
| 18 | ಮುಂಗಾರಿನ ಮಳೆಯಾಗೋಣ | ಸಂಕಲ್ಪಗೀತೆ | ಎದೆ ತುಂಬಿ ಹಾಡಿದೆನು | ಜಿ.ಎಸ್.ಶಿವರುದ್ರಪ್ಪ | ಕವಿ | ಓದುಗರಿಗೆ |
| 19 | ಹೊಸ ಭರವಸೆಗಳ ಕಟ್ಟೋಣ | ಸಂಕಲ್ಪಗೀತೆ | ಎದೆ ತುಂಬಿ ಹಾಡಿದೆನು | ಜಿ.ಎಸ್.ಶಿವರುದ್ರಪ್ಪ | ಕವಿ | ಓದುಗರಿಗೆ |
| 20 | ಹೊಸ ಎಚ್ಚರದೊಳು ಬದುಕೋಣ | ಸಂಕಲ್ಪಗೀತೆ | ಎದೆ ತುಂಬಿ ಹಾಡಿದೆನು | ಜಿ.ಎಸ್.ಶಿವರುದ್ರಪ್ಪ | ಕವಿ | ಓದುಗರಿಗೆ |
| 21 | ರೆಕ್ಕೆಗಳೆರಡು ಪಕ್ಕದಲ್ಲುಂಟು, | ಹಕ್ಕಿ ಹಾರುತಿದೆ ನೋಡಿದಿರಾ | ಗರಿ | ದ.ರಾ.ಬೇಂದ್ರೆ | ಕವಿ | ಓದುಗರಿಗೆ |
| 22 | ಸಾರ್ವಭೌಮರ ನೆತ್ತಿಯ ಕುಕ್ಕಿ | ಹಕ್ಕಿ ಹಾರುತಿದೆ ನೋಡಿದಿರಾ | ಗರಿ | ದ.ರಾ.ಬೇಂದ್ರೆ | ಕವಿ | ಓದುಗರಿಗೆ |
| 23 | ಬಲ್ಲರು ಯಾರ ಹಾಕಿದ ಹೊಂಚ | ಹಕ್ಕಿ ಹಾರುತಿದೆ ನೋಡಿದಿರಾ | ಗರಿ | ದ.ರಾ.ಬೇಂದ್ರೆ | ಕವಿ | ಓದುಗರಿಗೆ |
| 24 | ಹೊಸಗಾಲದ ಹಸು ಮಕ್ಕಳ ಹರಸಿ | ಹಕ್ಕಿ ಹಾರುತಿದೆ ನೋಡಿದಿರಾ | ಗರಿ | ದ.ರಾ.ಬೇಂದ್ರೆ | ಕವಿ | ಓದುಗರಿಗೆ |
| 25 | ಮಂಗಳ ಲೋಕದ ಅಂಗಳಕೇರಿ | ಹಕ್ಕಿ ಹಾರುತಿದೆ ನೋಡಿದಿರಾ | ಗರಿ | ದ.ರಾ.ಬೇಂದ್ರೆ | ಕವಿ | ಓದುಗರಿಗೆ |
| 26 | ರವಿ ಸುತನ ಕಿವಿಯಲಿ ಬಿತ್ತಿದನು ಭಯವ | ಕೌರವೇಂದ್ರನ ಕೊಂದೆ ನೀನು | ಕರ್ಣಾಟಭಾರತ ಕಥಾಮಂಜರಿ | ಕುಮಾರವ್ಯಾಸ | ಕವಿ | |
| 27 | ಬಾಯ್ದಂಬುಲಕೆ ಕೈಯಾನುವರೆ | ಕೌರವೇಂದ್ರನ ಕೊಂದೆ ನೀನು | ಕರ್ಣಾಟಭಾರತ ಕಥಾಮಂಜರಿ | ಕುಮಾರವ್ಯಾಸ | ಕೃಷ್ಣ | ಕರ್ಣನಿಗೆ |
| 28 | ಜೀಯ ಹಸಾದವೆಂಬುದು ಕಷ್ಟ | ಕೌರವೇಂದ್ರನ ಕೊಂದೆ ನೀನು | ಕರ್ಣಾಟಭಾರತ ಕಥಾಮಂಜರಿ | ಕುಮಾರವ್ಯಾಸ | ಕೃಷ್ಣ | ಕರ್ಣನಿಗೆ |
| 29 | ನಿನ್ನಪದೆಸೆಯ ಬಯಸುವವನಲ್ಲ | ಕೌರವೇಂದ್ರನ ಕೊಂದೆ ನೀನು | ಕರ್ಣಾಟಭಾರತ ಕಥಾಮಂಜರಿ | ಕುಮಾರವ್ಯಾಸ | ಕೃಷ್ಣ | ಕರ್ಣನಿಗೆ |
| 30 | ಮಾರಿಗೌತಣವಾಯ್ತು ನಾಳಿನ ಭಾರತವು | ಕೌರವೇಂದ್ರನ ಕೊಂದೆ ನೀನು | ಕರ್ಣಾಟಭಾರತ ಕಥಾಮಂಜರಿ | ಕುಮಾರವ್ಯಾಸ | ಕರ್ಣ | ಕೃಷ್ಣನಿಗೆ |

| | | | | | | |
|---|---|---|---|---|---|---|
| 31 | ನೆಲಕಿರಿವೆನೆಂದು ಬಗೆದಿರೆ ಚರಕಿರಿವೆಂ | ಛಲಮನೆ ಮೆರೆವೆಂ | ಸಾಹಸ ಭೀಮ ವಿಜಯ | ರನ್ನ | ದುರ್ಯೋಧನ | ಭೀಷ್ಮಾಚಾರ್ಯರಿಗೆ |
| 32 | ಸಮರದೊಳೆನಗಜ್ಜ ಪೇಳಿಮಾವುದು ಕಜ್ಜಂ | ಛಲಮನೆ ಮೆರೆವೆಂ | ಸಾಹಸ ಭೀಮ ವಿಜಯ | ರನ್ನ | ದುರ್ಯೋಧನ | ಭೀಷ್ಮಾಚಾರ್ಯರಿಗೆ |
| 33 | ಪಾಂಡವರೊಳಿರಿದು ಛಲಮನೆ ಮೆರವೆಂ | ಛಲಮನೆ ಮೆರೆವೆಂ | ಸಾಹಸ ಭೀಮ ವಿಜಯ | ರನ್ನ | ದುರ್ಯೋಧನ | ಭೀಷ್ಮಾಚಾರ್ಯರಿಗೆ |
| 34 | ಮೇಣಾಯ್ತು ಕೌರವಂಗವನಿತಳಂ | ಛಲಮನೆ ಮೆರೆವೆಂ | ಸಾಹಸ ಭೀಮ ವಿಜಯ | ರನ್ನ | ದುರ್ಯೋಧನ | ಭೀಷ್ಮಾಚಾರ್ಯರಿಗೆ |
| 35 | ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ. | ಯುದ್ಧ | ಚಪ್ಪಲಿಗಳು | ಸಾ.ರಾ ಅಬೂಬಕ್ಕರ್ | ರಾಹಿಲ | ಮುದುಕಿಗೆ |
| 36 | ನಾನು ಆಕೆಯನ್ನು ಪರೀಕ್ಷಿಸುವೆ ನೀವು ಬಿಸಿನೀರು ಸಿದ್ಧಪಡಿಸಿ. | ಯುದ್ಧ | ಚಪ್ಪಲಿಗಳು | ಸಾ.ರಾ ಅಬೂಬಕ್ಕರ್ | ರಾಹಿಲ | ಮುದುಕಿಗೆ |
| 37 | ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ. | ಯುದ್ಧ | ಚಪ್ಪಲಿಗಳು | ಸಾ.ರಾ ಅಬೂಬಕ್ಕರ್ | ಮುದುಕಿ | ತನ್ನಲ್ಲೇ |
| 38 | ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ ಅದನ್ನು ನೋಡಿ. | ಯುದ್ಧ | ಚಪ್ಪಲಿಗಳು | ಸಾ.ರಾ ಅಬೂಬಕ್ಕರ್ | ಮುದುಕಿ | ಸೈನಿಕರಿಗೆ |
| 39 | ಆವುದೀ ಮರಳು? ನಮ್ಮೆಡೆಗೆ ಬರುತಿಹುದು | ಶಬರಿ | ಏಕಾಂಕ ನಾಟಕಗಳು | ಪು.ತಿ. ನರಸಿಂಹಾರ್ | ರಾಮ | ಲಕ್ಷ್ಮಣನಿಗೆ |
| 40 | ನಾಚುತಿಹೆನೀ  ಪೂಜ್ಯಯೀ ನಲುಮೆಯಿಂದ | ಶಬರಿ | ಏಕಾಂಕ ನಾಟಕಗಳು | ಪು.ತಿ. ನರಸಿಂಹಾರ್ | ರಾಮ | ಲಕ್ಷ್ಮಣನಿಗೆ |
| 41 | ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ? | ಶಬರಿ | ಏಕಾಂಕ ನಾಟಕಗಳು | ಪು.ತಿ. ನರಸಿಂಹಾರ್ | ರಾಮ | ಶಬರಿಗೆ |
| 42 | ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ. | ಶಬರಿ | ಏಕಾಂಕ ನಾಟಕಗಳು | ಪು.ತಿ. ನರಸಿಂಹಾರ್ | ಶಬರಿ | ರಾಮನಿಗೆ |
| 43 | ಬೆಳಕಿಗೆ ಒಲಿದವರ್ ಉರಿವ ಬತ್ತಿಯ ಕರುಕ ಕಾಣರು. | ಶಬರಿ | ಏಕಾಂಕ ನಾಟಕಗಳು | ಪು.ತಿ. ನರಸಿಂಹಾರ್ | ರಾಮ | ಲಕ್ಷ್ಮಣನಿಗೆ |
| 44 | ನಿಮ್ಮ ದೇಶದ ಗೌರವವನ್ನು ಕಾಯಿರಿ ಇದು ದೊಡ್ಡದಾದ ರಾಷ್ಟ್ರ. | ಲಂಡನ್ ನಗರ | ಸಮುದ್ರಾಚೆ ಯಿಂದ | ವಿ.ಕೃಗೋಕಾಕ್ | ಲೇಖಕರು | ನೆಲ್ಸನ್ ಮೂರ್ತಿ ನೋಡಿ |
| 45 | ಹೊತ್ತು! ಹೊತ್ತು! ಹೊತ್ತೇ ಹಣ. | ಲಂಡನ್ ನಗರ | ಸಮುದ್ರಾಚೆಯಿಂ ದ | ವಿ.ಕೃಗೋಕಾಕ್ | ಲೇಖಕರು | ತಮ್ಮಲ್ಲೇ |

| | | | | | | |
|---|---|---|---|---|---|---|
| 46 | ಯಾರನ್ನು ತುಳಿದರೇನು! ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೇ ಮಣ್ಣು ಮಣ್ಣು! | ಲಂಡನ್ ನಗರ | ಸಮುದ್ರಾಚೆಯಿಂದ | ವಿ.ಕೃಗೋಕಾಕ್ | ಲೇಖಕರು | ತಮ್ಮಲ್ಲೆ |
| 47 | ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ. | ಲಂಡನ್ ನಗರ | ಸಮುದ್ರಾಚೆಯಿಂದ | ವಿ.ಕೃಗೋಕಾಕ್ | ಬೇಕನ್ | |
| 48 | ಕಣ್ಣ ನೀರಂ ತೀವಿ ನೆಲನಂ ಬರೆಯುತ್ತಿರೆ. | ಅಗ್ನಿಭೂತಿ ವಾಯುಭೂತಿಯರ ಕಥೆ | ವಡ್ಡಾರಾಧನೆ | ಶಿವಕೋಟ್ಯಾಚಾರ್ಯ | ಲೇಖಕರು | |
| 49 | ವಿದ್ಯಾರ್ಥಿಗಳಾಗಿಯೋದಂ ಕಲ್ವೆಂ ಮೆಂಬಳ್ತಿಯೊಳ್ ಬಂದಿರಪ್ಪೊಡೆ | ಅಗ್ನಿಭೂತಿ ವಾಯುಭೂತಿಯರ ಕಥೆ | ವಡ್ಡಾರಾಧನೆ | ಶಿವಕೋಟ್ಯಾಚಾರ್ಯ | ಸೂರ್ಯಮಿತ್ರ | ಅಗ್ನಿಭೂತಿ ವಾಯುಭೂತಿಯರಿಗೆ |
| 50 | ಪಸರಂಗೊಟ್ಟೆನಿಲ್ಲಿದರ್ಕ್ಕೆ ಮುಳಿಯದಿರಿಂ | ಅಗ್ನಿಭೂತಿ ವಾಯುಭೂತಿಯರ ಕಥೆ | ವಡ್ಡಾರಾಧನೆ | ಶಿವಕೋಟ್ಯಾಚಾರ್ಯ | ಸೂರ್ಯಮಿತ್ರ | ಅಗ್ನಿಭೂತಿ ವಾಯುಭೂತಿಯರಿಗೆ |
| 51 | ಪಂಡಿತಜನಮೆಲ್ಲಂ ಮೆಚ್ಚಿ ಬಿಚ್ಚಳಿಸಿ | ಅಗ್ನಿಭೂತಿ ವಾಯುಭೂತಿಯರ ಕಥೆ | ವಡ್ಡಾರಾಧನೆ | ಶಿವಕೋಟ್ಯಾಚಾರ್ಯ | ಲೇಖಕರು | |
| 52 | ಹಸುರಾದುದು ಕವಿ ಆತ್ಮ | ಹಸುರು | ಪಕ್ಷಿಕಾಶಿ | ಕುವೆಂಪು | ಕವಿ | ಓದುಗರಿಗೆ |
| 53 | ಬೇರೆ ಬಣ್ಣವನೆ ಕಾಣೆ | ಹಸುರು | ಪಕ್ಷಿಕಾಶಿ | ಕುವೆಂಪು | ಕವಿ | ಓದುಗರಿಗೆ |
| 54 | ಹಸುರು ಹಸುರಿಳೆಯುಸಿರೂ | ಹಸುರು | ಪಕ್ಷಿಕಾಶಿ | ಕುವೆಂಪು | ಕವಿ | ಓದುಗರಿಗೆ |
| 55 | ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್ | ಹಸುರು | ಪಕ್ಷಿಕಾಶಿ | ಕುವೆಂಪು | ಕವಿ | ಓದುಗರಿಗೆ |
| 56 | ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ | ಹಲಗಲಿ ಬೇಡರು | ಕನ್ನಡ ಜನಪದ ಗೀತೆಗಳು | ಬಿ.ಎಸ್.ಗದ್ದಗಿ ಮಠ | ಬ್ರಿಟೀಷ ಸರ್ಕಾರ | ಅಧಿಕಾರಿಗಳಿಗೆ |
| 57 | ಜೀವ ಸತ್ತು ಹೋಗುವುದು ಗೊತ್ತ | ಹಲಗಲಿ ಬೇಡರು | ಕನ್ನಡ ಜನಪದ ಗೀತೆಗಳು | ಬಿ.ಎಸ್.ಗದ್ದಗಿ ಮಠ | ಹಲಗಲಿ ಬೇಡರು | ತಮ್ಮಲ್ಲೆ |
| 58 | ಹೊಡೆದರೂ ಗುಂಡ ಕರುಣೆ ಇಲ್ಲದ್ಹಂಗ | ಹಲಗಲಿ ಬೇಡರು | ಕನ್ನಡ ಜನಪದ ಗೀತೆಗಳು | ಬಿ.ಎಸ್.ಗದ್ದಗಿ ಮಠ | ಜನಪದ ಕವಿ | ಓದುಗರಿಗೆ |
| 59 | ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು | ಹಲಗಲಿ ಬೇಡರು | ಕನ್ನಡ ಜನಪದ ಗೀತೆಗಳು | ಬಿ.ಎಸ್.ಗದ್ದಗಿ ಮಠ | ಜನಪದ ಕವಿ | ಓದುಗರಿಗೆ |
| 60 | ರಘೂದ್ವಹನ ಸ್ವಲ್ಗೇಳಿ ನಮಿಸಲ್ | ವೀರಲವ | ಜೈಮಿನಿ ಭಾರತ | ಲಕ್ಷ್ಮೀಶ | ಕವಿ | ಓದುಗರಿಗೆ |
| 61 | ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ | ವೀರಲವ | ಜೈಮಿನಿ ಭಾರತ | ಲಕ್ಷ್ಮೀಶ | ಲವ | ತನ್ನಲ್ಲೆ |
| 62 | ಅರಸುಗಳ ವಾಜಿಯಂ ಬಿಡು | ವೀರಲವ | ಜೈಮಿನಿ ಭಾರತ | ಲಕ್ಷ್ಮೀಶ | ಮುನಿಸುತರು | ಲವನಿಗೆ |

| | | | | | | |
|---|---|---|---|---|---|---|
| 63 | ಜಾನಕಿಯ ಮಗನಿದಕೆ ಬೆದರುವನೆ | ವೀರಲವ | ಜೈಮಿನಿ ಭಾರತ | ಲಕ್ಷ್ಮೀಶ | ಲವ | ಮುನಿಸುತರಿಗೆ |
| 64 | ಈಗಳೊಂದಡಕೆಯುಮಿಲ್ಲ ಕೈಯೊಳ್ | ಕೆಮ್ಮನೆ ಮೀಸೆವೊತ್ತನೇ | ಸಾಹಸಬೀಮ ವಿಜಯಂ | ಪಂಪ | ಪರಶುರಾಮರು | ದ್ರೋಣರಿಗೆ |
| 65 | ವಿದ್ಯಾಧನಮೆ  ಧನಮಪ್ಪುದು | ಕೆಮ್ಮನೆ ಮೀಸೆವೊತ್ತನೇ | ಸಾಹಸಬೀಮ ವಿಜಯಂ | ಪಂಪ | ದ್ರೋಣರು | ಪರಶುರಾಮರಿಗೆ |
| 66 | ಎಂತು ನಾಣಿಲಿಗರಪ್ಪರೆ ಮಾನಸರ್ | ಕೆಮ್ಮನೆ ಮೀಸೆವೊತ್ತನೇ | ಸಾಹಸಬೀಮ ವಿಜಯಂ | ಪಂಪ | ದ್ರುಪದ | ದ್ರೋಣನಿಗೆ |
| 67 | ಜಲಕ್ಕನೀಗಳರಿದೆಂ ಸಿರಿ ಕಳ್ಪೊಡವುಟ್ಟಿತೆಂಬುದ | ಕೆಮ್ಮನೆ ಮೀಸೆವೊತ್ತನೇ | ಸಾಹಸಬೀಮ ವಿಜಯಂ | ಪಂಪ | ದ್ರೋಣ | ದ್ರುಪದನಿಗೆ |
| 68 | ನೋಳವಿಂಗೆ ಕುಪ್ಪೆ ವರಂ | ಕೆಮ್ಮನೆ ಮೀಸೆವೊತ್ತನೇ | ಸಾಹಸಬೀಮ ವಿಜಯಂ | ಪಂಪ | ದ್ರೋಣ | ದ್ರುಪದನಿಗೆ |

**ಗಾದೆ ಮಾತುಗಳ ವಿಸ್ತಾರ 3 ಅಂಕಗಳು**

- **ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು**

ವೇದ ಸುಳ್ಳಾದರು ಗಾದೆ ಸುಳ್ಳಾಗದು, ಗಾದೆಗಳು ವೇದಗಳಿಗೆ ಸಮಾನ, ಗಾದೆಗಳು ಹಿರಿಯರು ಅನುಭವದ ನುಡಿ ಮುತ್ತುಗಳಾಗಿವೆ ಅಂತಹ ಕನ್ನಡದ ಪ್ರಸಿದ್ಧ ಗಾದೆಗಳಲ್ಲಿ ಈ ಗಾದೆ ಮಾತು ಕೂಡ ಒಂದಾಗಿದೆ.

ತಾಯಿ ನಮ್ಮನ್ನು ಒಂಭತ್ತು ತಿಂಗಳು ತನ್ನ ಗರ್ಭದಲ್ಲಿಸಿಕೊಂಡು ಪೋಷಿಸಿದರೆ, ಈ ನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಲೇ ಇಟ್ಟು ಪೋಷಿಸುತ್ತದೆ. ಹೆತ್ತ ತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದು ಇಲ್ಲ. ಅದೇ ರೀತಿ ಜನ್ಮ ಭೂಮಿಯ ಸಂಬಂಧವು ಸಹ ಬಿಡಿಸಲಾಗದಂತದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತು ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು ಎಂಬುದನ್ನು ರಾಮಾಯಣ ಮಹಾ ಕಾವ್ಯಗಳಲ್ಲಿ ಶ್ರೀರಾಮನು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

**ಪಠ್ಯದಲ್ಲಿರುವ ಗಾದೆಮಾತುಗಳು**

- ಕೈ ಕೆಸರಾದರೆ ಬಾಯಿ ಮೊಸರು.
- ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ.
- ಕೂಡಿ ಬಾಳಿದರೆ ಸ್ವರ್ಗ ಸುಖ.
- ಮಾತೇ ಮುತ್ತು, ಮಾತೇ ಮೃತ್ಯು
- ಕಟ್ಟುವುದು ಕಠಿಣ; ಕೆಡುಹುವುದು ಸುಲಭ.
- ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ
- ಆಳಾಗಬಲ್ಲವನು ; ಅರಸನಾಗಬಲ್ಲ.
- ತಾಳಿದವನು ಬಾಳಿಯಾನು.
- ಮನಸ್ಸಿದ್ದರೆ ಮಾರ್ಗ.

# ಅಪಠಿತ ಗದ್ಯ

**ಮಾದರಿ .1.**

ಬಿ. ವಿ. ಕಾರಂತರು ಹುಟ್ಟಿದ್ದು ಬಂಟ್ವಾಳ ತಾಲೂಕಿನ ಬಾಬುಕೋಡಿ ಎಂಬ ಗ್ರಾಮದಲ್ಲಿ. ಆರ್ಥಿಕವಾಗಿ ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ತಾಯಿ ಲಕ್ಷ್ಮಮ್ಮನವರು ಹಾಡುತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತಮುತ್ತಲ ಊರುಗಳ ಜಾತ್ರೆ, ಭೂತದ ಕೋಲ, ರಥೋತ್ಸವ, ಪ್ರಾರ್ಥನೆಗಳು, ವಾದ್ಯಗಳ ಧ್ವನಿ ಕಾರಂತರಿಗೆ ಸಿಕ್ಕ ಕಲಾ ಶ್ರೀಮಂತಿಕೆ.

ಕನ್ನಡ ರಂಗಭೂಮಿಯನ್ನೇ ಏಕೆ, ಇಡೀ ಭಾರತದ ಅನೇಕ ರಂಗಭೂಮಿಗಳನ್ನು ಶ್ರೀಮಂತ ಗೊಳಿಸಿದವರು ಕಾರಂತರು. ಅವರ ತಮ್ಮ ಪ್ರಯೋಗಗಳಿಗೆ ಒಂದು ನಿರ್ದಿಷ್ಟ ಶೈಲಿ ರೂಢಿಸಿದವರಲ್ಲ, ಅಲ್ಲಲ್ಲಿಗೆ ಸಿಗುವ ಸಂಪನ್ಮೂಲಗಳನ್ನ ಆಶ್ರಯಿಸಿ ಅಲ್ಲಿಗೆ ತಕ್ಕದೆನಿಸುವ ನಾಟಕ ಹುಡುಕಿ ಆಡಿಸುವ ಪ್ರವೃತ್ತಿ ಅವರದು. ಬಾಲ್ಯದಲ್ಲಿ ಶಾಲೆ-ಮನೆ ಎರಡರಿಂದಲೂ ವಂಚಿತರಾದ ಕಾರಂತರು, 'ಮಕ್ಕಳ ಸ್ಕೂಲ್ ರಂಗಭೂಮಿಯಲ್ಲಿ' ಎಂಬಂತೆ ಮಕ್ಕಳ ರಂಗಭೂಮಿಗೆ ಶ್ರಮಿಸಿದರು. ಮಕ್ಕಳಿಗಾಗಿ ನಾಟಕ ರಚಿಸಿ ನಿರ್ದೇಶಿಸಿದ್ದಾರೆ. ಪಂಜರ ಶಾಲೆ, ಕಿಂದರಜೋಗಿ, ಮೂಕನ
ಮಕ್ಕಳು ಮೊದಲಾದ ನಾಟಕಗಳನ್ನ ಮಕ್ಕಳಿಗಾಗಿ ಮಾಡಿಸಿದ್ದಾರೆ. ಮಕ್ಕಳ ರಂಗದ ಕಲ್ಪನೆ ಮೂಲಕ ಚಿನ್ನರಿಗಾಗಿ ಹೊಸ ರಂಗಲೋಕ ನಿರ್ಮಿಸಿದವರು ಕಾರಂತರು.

**ಪ್ರಶ್ನೆಗಳು**

ಅ) ಮಕ್ಕಳ ರಂಗ ಭೂಮಿಗೆ ಕಾರಂತರ ಕೊಡುಗೆಗಳೇನು?

ಬ) ಬಾಲ್ಯದಲ್ಲಿ ಕಾರಂತರಿಗೆ ಸಿಕ್ಕ ಕಲಾ ಶ್ರೀಮಂತಿಕೆ ಬಗೆಗಳಾವು?

**ಉತ್ತರಗಳು :**

ಅ) ಬಾಲ್ಯದಲ್ಲಿ ಶಾಲೆ-ಮನೆ ಎರಡರಿಂದಲೂ ವಂಚಿತರಾದ ಕಾರಂತರು, 'ಮಕ್ಕಳ ಸ್ಕೂಲ್ ರಂಗಭೂಮಿಯಲ್ಲಿ' ಎಂಬಂತೆ ಮಕ್ಕಳ ರಂಗಭೂಮಿಗೆ ಶ್ರಮಿಸಿದರು. ಮಕ್ಕಳಿಗಾಗಿ ನಾಟಕ ರಚಿಸಿ ನಿರ್ದೇಶಿಸಿದ್ದಾರೆ. ಪಂಜರ ಶಾಲೆ, ಕಿಂದರಜೋಗಿ, ಮೂಕನ
ಮಕ್ಕಳು ಮೊದಲಾದ ನಾಟಕಗಳನ್ನ ಮಕ್ಕಳಿಗಾಗಿ ಮಾಡಿಸಿದ್ದಾರೆ. ಮಕ್ಕಳ ರಂಗದ ಕಲ್ಪನೆ ಮೂಲಕ ಚಿನ್ನರಿಗಾಗಿ ಹೊಸ ರಂಗಲೋಕ ನಿರ್ಮಿಸಿದವರು ಕಾರಂತರು.

ಬ) ಬಿ. ವಿ. ಕಾರಂತರು ಹುಟ್ಟಿದ್ದು ಬಂಟ್ವಾಳ ತಾಲೂಕಿನ ಬಾಬುಕೋಡಿ ಎಂಬ ಗ್ರಾಮದಲ್ಲಿ. ಆರ್ಥಿಕವಾಗಿ ಕಾರಂತರಿಗೆ ಬಡತನವಿದ್ದರೂ ಸಾಂಸ್ಕೃತಿಕವಾಗಿ ಬಡತನವಿರಲಿಲ್ಲ. ತಾಯಿ ಲಕ್ಷ್ಮಮ್ಮನವರು ಹಾಡುತಿದ್ದ ಸಂಪ್ರದಾಯದ ಹಾಡುಗಳು, ಮನೆಯಲ್ಲಿ ನಡೆಯುತ್ತಿದ್ದ ಭಜನೆಗಳು, ಊರಿನ ಹರಿಕಥೆ, ಯಕ್ಷಗಾನ, ಸುತ್ತಮುತ್ತಲ ಊರುಗಳ ಜಾತ್ರೆ, ಭೂತದ ಕೋಲ, ರಥೋತ್ಸವ, ಪ್ರಾರ್ಥನೆಗಳು, ವಾದ್ಯಗಳ ಧ್ವನಿ ಕಾರಂತರಿಗೆ ಸಿಕ್ಕ ಕಲಾ ಶ್ರೀಮಂತಿಕೆ

**ಮಾದರಿ .2.**

ಸ್ಥೂಲವಾಗಿ ನಗೆಯನ್ನು ಎರಡು ಬಗೆಯಾಗಿ ವಿಂಗಡಿಸಬಹುದು. ಮೆಚ್ಚು ನಗೆ ಮತ್ತು ಚುಚ್ಚು ನಗೆ. ಬುದ್ಧದೇವ ನ ಕ್ಕುದ್ದು ಮುಗುಳುನಗೆ; ಶ್ರೀ ಕೃಷ್ಣನದು ಸರಸನಗೆ; ಪಂಪ ಕವಿ ಬಿರಿದುದು ರಸನ ಗೆ. ಈ ಬಗೆಯ ನಗೆಗಳಲ್ಲಿ ಮಾಧುರ್ಯವಿರುತ್ತದೆ. ಅದನ್ನು ಜನತೆ ಮೆಚ್ಚುತ್ತದೆ. ಮೆಚ್ಚುವ ನಗೆಯೇ ಮೆಚ್ಚುನಗೆ. ಅನ್ಯರ ಮನಕ್ಕೆ ನೋವಾಗುವಂತೆ ನಗುವುದು ಚುಚ್ಚುನಗೆ. ನಯಸೇನನ ಮೂದಲಿಕೆ; ಬ್ರಹ್ಮಶಿವನ ಕಟಕಿ; ತೆನಾಲಿ ರಾಮಕೃಷ್ಣನ ಕುಚೇಷ್ಟೇ, ಈ ನಗೆಗಳಲ್ಲಿ ಒರಟುತನ ಹೆಚ್ಚು, ಮುಗ್ಧನಗೆ ನಮ್ಮನ್ನು ಕಾಯುತ್ತದೆ. ಅದರಿಂದ ಕಷ್ಟ ತುಂಬಿದ ನಮ್ಮ ಬಾಳು ಹಗುರಾಗುತ್ತದೆ. ಆದರೆ ಒರಟುನಗೆ ಮಸೆದ ಚೂರಿ ಇದ್ದಂತೆ; ಅದು ಕೊಲ್ಲುವ ನಗೆ. ವವರೆಗೆ ಸರ್ವಜ್ಞನ ಮಾತಿನಲ್ಲಿಯೂ ಈ ಧ್ವನಿಯೇ ಇದೆ.

**ಪ್ರಶ್ನೆಗಳು**

ಅ) ಮೆಚ್ಚು ನಗೆ ಎಂದರೇನು? ಉದಾಹರಣೆ ಕೊಡಿ.

ಬ) ಚುಚ್ಚು ನಗೆ ಎಂದರೇನು ಉದಾಹರಣೆ ಕೊಡಿ.

**ಉತ್ತರಗಳು:**

ಅ) ಬುದ್ಧದೇವ ನಕ್ಕುದ್ದು ಮುಗುಳುನಗೆ; ಶ್ರೀ ಕೃಷ್ಣನದು ಸರಸನಗೆ; ಪಂಪ ಕವಿ ಬಿರಿದುದು ರಸನ ಗೆ. ಈ ಬಗೆಯ ನಗೆಗಳಲ್ಲಿ ಮಾಧುರ್ಯವಿರುತ್ತದೆ. ಅದನ್ನು ಜನತೆ ಮೆಚ್ಚುತ್ತದೆ. ಮೆಚ್ಚುವ ನಗೆಯೇ ಮೆಚ್ಚುನಗೆ.

ಬ) ಅನ್ಯರ ಮನಕ್ಕೆ ನೋವಾಗುವಂತೆ ನಗುವುದು ಚುಚ್ಚುನಗೆ. ನಯಸೇನನ ಮೂದಲಿಕೆ; ಬ್ರಹ್ಮಶಿವನ ಕಟಕಿ; ತೆನಾಲಿ ರಾಮಕೃಷ್ಣನ ಕುಚೇಷ್ಟೇ, ಈ ನಗೆಗಳಲ್ಲಿ ಒರಟುತನ ಹೆಚ್ಚು

## ಪತ್ರಲೇಖನ ಮಾದರಿ 1 **5 ಅಂಕಗಳು**

**1. ನಿಮ್ಮನ್ನು ಹಾಸನ ಜಿಲ್ಲೆಯ ಅರಸಿಕೆರೆಯ ಶ್ರೀನಾಥ /ಸ್ನೇಹಾ ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯ ಬೀದಿ ದೀಪಗಳ ದುರಸ್ತಿಗೊಳಿಸುವಂತೆ ಕೋರಿ ವಿದ್ಯುತ್ ಚಕ್ತಿ ಇಲಾಖೆಯ ಮುಖ್ಯ ಅಭಿಯಂತರರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.**

ಇಂದ
ಸ್ನೇಹಾ
ಬಸವನಗರ
ಅರಸಿಕೆರೆ
ಹಾಸನ ಜಿಲ್ಲಾ

ಗೆ,
ಮುಖ್ಯ ಅಭಿಯಂತರು
ವಿದ್ಯುತ್ ಚ್ಚಕ್ತಿ ಇಲಾಖೆ
ಅರಸಿಕೆರೆ

ಮಾನ್ಯರೇ,

ವಿಷಯ : ನಮ್ಮ ಬಡಾವಣೆಯ ಬೀದಿ ದೀಪ ದುರಸ್ತಿಗೊಳಿಸುವಂತೆ ಕೋರಿ.

ಈ ಮೇಲ್ಕಾಣಿಸಿದ ವಿಷಯದಂತೆ ನಾನು ಬಸವನಗರ ಬಡಾವಣೆಯ ನಿವಾಸಿಯಾಗಿದ್ದುನಮ್ಮ ಬಡಾವಣೆಯ ಬಹಳಷ್ಟು ಬೀದಿ ದೀಪಗಳು ಹಾಳಾಗಿ ಹೋಗಿರುವುದರಿಂದ ಜನರ ಓಡಾಟಕ್ಕೆ ಬಹಳ ತೊಂದರೆ ಆಗಿದೆ. ಕಾರಣ ತಾವು ಆದಷ್ಟು ಬೇಗ ಅವುಗಳನ್ನು ದುರಸ್ತಿಗೊಳಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ

ಸ್ಥಳ: ಅರಸಿಕೆರೆ
ದಿನಾಂಕ: 30/08/2024

ತಮ್ಮವಿಶ್ವಾಸಿ
ಸ್ನೇಹಾ

# ಮಾದರಿ-2

**2) ನಿಮ್ಮನ್ನು ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಆಕಾಶ/ಅದಿತಿ ಎಂದು ಭಾವಿಸಿಕೊಂಡು ನಿಮ್ಮೂರಿನಲ್ಲಿ ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸುವಂತೆ ಕೋರಿ ಜಿಲ್ಲಾ ಗ್ರಂಥಾಲಯ ಅಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.**

ಇಂದ
ಆಕಾಶ
ಜಮಖಂಡಿ
ಬಾಗಲಕೋಟೆ ಜಿಲ್ಲೆ

ಇವರಿಗೆ
ಮಾನ್ಯ ಜಿಲ್ಲಾ ಗ್ರಂಥಾಲಯಾಧಿಕಾರಿಗಳು
ಬಾಗಲಕೋಟೆ

ಮಾನ್ಯರೇ,

ವಿಷಯ: ನಮ್ಮೂರಿನಲ್ಲಿ ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸುವಂತೆ ಕೋರಿ.

ಈ ಮೇಲ್ಕಾಣಿಸಿದ ವಿಷಯದಂತೆ ನಾನು ಜಮಖಂಡಿ ಊರಿನ ನಿವಾಸಿಯಾಗಿದ್ದು ನಮ್ಮೂರಿನಲ್ಲಿ ಸಾರ್ವಜನಿಕ ಗ್ರಂಥಾಲಯ ಇಲ್ಲದ್ದರಿಂದ ಓದುಗರಿಗೆ ಸಾಕಷ್ಟು ಕಷ್ಟ ವಾಗುತ್ತಿದೆ. ಹಾಗಾಗಿ ಆದಷ್ಟು ಬೇಗನೆ ನಮ್ಮೂರಿನಲ್ಲಿ ಒಂದು ಸಾರ್ವಜನಿಕ ಗ್ರಂಥಾಲಯವನ್ನು ಸ್ಥಾಪಿಸಿ ಕೊಡಬೇಕೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

ವಂದನೆಗಳೊಂದಿಗೆ

ಸ್ಥಳ:ಜಮಖಂಡಿ — ತಮ್ಮ ವಿಶ್ವಾಸಿ
ದಿನಾಂಕ:3-9-2024 — ಆಕಾಶ

**ವ್ಯವಹಾರಿಕ ಪತ್ರದ ನಮೂನೆ**

ಇಂದ

____________________

____________________

____________________

ಇವರಿಗೆ,

____________________

____________________

____________________

ಮಾನ್ಯರೇ,

ವಿಷಯ : ____________________________________________________________________ ಕೋರಿ.

______________________________________________________________________________________

______________________________________________________________________________________

______________________________________________________________________________________

______________________________________________________________________________________

______________________________________________________________________________________

______________________________________________________________________________________

ವಂದನೆಗಳೊಂದಿಗೆ

ಸ್ಥಳ : _________________ ತಮ್ಮ ವಿಶ್ವಾಸಿ

ದಿನಾಂಕ : ________________ _________________

# ಮಾದರಿ ಪ್ರಬಂಧಗಳು

## ಚಂದ್ರಯಾನ -೩

ಪೀಠಿಕೆ,

ಬಾಹ್ಯಾಕಾಶ ಕ್ಷೇತ್ರದಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದ ವಿಶ್ವದ ಕೆಲವೇ ಕೆಲವು ರಾಷ್ಟ್ರಗಳಲ್ಲಿ ಭಾರತವು ಒಂದು. ಅದರಲ್ಲೂ ಚಂದ್ರಯಾನವನ್ನು ಯಶಸ್ವಿಯಾಗಿ ಕೈಗೊಂಡ ಅಮೆರಿಕ, ಜಪಾನ್ ಮತ್ತು ಚೀನಾಗಳ ನಂತರ ಯಶಸ್ವಿಯಾಗಿ ಚಂದ್ರಯಾನಪೂರ್ಣ ಗೊಳಿಸಿದ ಹೆಮ್ಮೆಯ ರಾಷ್ಟ್ರ ಭಾರತ. ಭಾರತವು ಚಂದ್ರಯಾನ ೧ ಮತ್ತು ಚಂದ್ರನ ೨ ನಂತರ ಚಂದ್ರಯಾನ ೩ ಅತ್ಯಂತ ಯಶಸ್ವಿಯಾಗಿ ಆಗಸ್ಟ್ 23- 2023 ರಂದು ಚಂದ್ರನ ಅಂಗಳದ ಮೇಲೆ ತನ್ನ ವಿಕ್ರಂ ಲ್ಯಾಂಡರನ್ನು ಸುರಕ್ಷಿತವಾಗಿ ಇಳಿಸಿತು. ಆ ಮೂಲಕ ಇಸ್ರೋ ಬಾಹ್ಯಾಕಾಶ್ರದಲ್ಲಿ ಭಾರತದ ರಾಷ್ಟ್ರ ಧ್ವಜ ಅಜರಾಮರವಾಗಿ ನೆಲೆಯೂರುವರಂತೆ ಮಾಡಿತ್ತು.

ವಿಷಯ ನಿರೂಪಣೆ,

ಚಂದ್ರನ ಮೇಲ್ಮೈಯಲ್ಲಿ ಸುರಕ್ಷಿತ ಮತ್ತು ಸರಳವಾದ ಲ್ಯಾಂಡಿಂಗ್ ಅನ್ನು ಪ್ರದರ್ಶಿಸಲು ವಿಕ್ರಂ ಲ್ಯಾಂಡರ್ ಹಾಗೂ ಚಂದ್ರನ ಮೇಲೆ ಪ್ರ ಜ್ಞಾನ ರೋವರ್ ಸಂಚರಿಸುವುದನ್ನು ಪ್ರದರ್ಶಿಸಲು ಮತ್ತು ಚಂದ್ರನ ಮೇಲ್ಮೈಯಲ್ಲಿ ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲು ಚಂದ್ರಯಾನ ಮಿಷನ್ ಉದ್ದೇಶಗಳನ್ನು ಸಾಧಿಸಲು ಲ್ಯಾಂಡರ್ ನಲ್ಲಿ ಹಲವು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಲಾಗಿದೆ ಈ ಯೋಜನೆಯ ಒಟ್ಟು ವೆಚ್ಚ ಕೇವಲ 615 ಕೋಟಿ ರೂಪಾಯಿಗಳು.

ಭಾರತವು ಚಂದ್ರಯಾನ ಯಶಸ್ವಿಯಿಂದ ಆರ್ಥಿಕವಾಗಿ ಪ್ರವಾಸೋದ್ಯಮ ,ಸಂಶೋಧನೆ ಇತರ ಹಲವು ಆಯಾಮಗಳಲ್ಲಿ ಲಾಭ ಪಡೆಯಲಿದೆ. ಚಂದ್ರ ಮತ್ತು ಅದರ ಕಕ್ಷೆಗೆ ಸಂಬಂಧಪಟ್ಟ ಸಂಪನ್ಮೂಲಗಳ ಉತ್ಪಾದನೆ, ಬಳಕೆ ಮತ್ತು ವಿನಿಮಯದ ಚಟುವಟಿಕೆಯನ್ನು ಚಂದ್ರನ ಆರ್ಥಿಕತೆ ಒಳಗೊಂಡಿರುತ್ತದೆ ಎನ್ನಲಾಗಿದೆ. ಚಂದ್ರಯಾನದ ಪ್ರತಿ ಅಧ್ಯಯನ ಅಂಶಗಳು, ಅಲ್ಲಿಂದ ತೆಗೆದ ಫೋಟೋಗಳು, ಎಲ್ಲವೂ ಸಹ ಭಾರತದ ಆಸ್ತಿಯಾಗಲಿವೆ. ಇದರಿಂದ ಎಲ್ಲವೂ ಚಂದ್ರಯಾನದ ಆರ್ಥಿಕತೆ ಆಗುತ್ತದೆ. ಇದರ ಯಶಸ್ಸಿನಿಂದ ಭಾರತಕ್ಕೆ ಆಗುವ ಮತ್ತೊಂದು ಲಾಭವೆಂದರೆ ಇಲ್ಲಿಯ ತನಕ ಯಾರು ಸ್ಪರ್ದಿ ಸ್ಪರ್ಶಿಸದ ಚಂದ್ರನ ದಕ್ಷಿಣ ಧ್ರುವವನ್ನು ಅನ್ವೇಷಿಸಿದ ಕೀರ್ತಿ ನಮ್ಮ ದೇಶಕ್ಕೆ ಸಲ್ಲುತ್ತದೆ. ಈ ಧ್ರುವ ಬಾಹ್ಯಾಕಾಶದ ಸಂಶೋಧಕರಿಗೆ ಬಹಳ ಕುತೂಹಲಕಾರಿ ಆದದ್ದು ಅಲ್ಲಿ ಸೂರ್ಯನ ಬೆಳಕು ಬೀಳದ ಕಾರಣ ವಿಶಿಷ್ಟ ಭೌಗೋಳಿಕ ಲಕ್ಷಣಗಳು ಮತ್ತು ಇತಿಹಾಸದಿಂದ ವೈಜ್ಞಾನಿಕವಾಗಿ ಆಸಕ್ತಿದಾಯಕವಾಗಿದೆ. ವೈಜ್ಞಾನಿಕ ಕ್ಷೇತ್ರದೊಂದಿಗೆ ಈ ಡಾಟಾ ಮನರಂಜನ ಕ್ಷೇತ್ರಕ್ಕೆ ಕೂಡ ಇದರ ಮಾಹಿತಿ ಅಗತ್ಯವಾಗಿದೆ. ಅಲ್ಲಿನ ಛಾಯಾಚಿತ್ರಗಳು, ವಿಡಿಯೋ, ಶಬ್ದಗಳನ್ನು ಸಿನಿಮಾ ಸಾಕ್ಷ ಚಿತ್ರ ವಿಡಿಯೋಗೆ ಮುಂತಾದವುಗಳಲ್ಲಿ ಬಳಕೆಗೆ ಖರೀದಿ ಮಾಡುವುದರಿಂದ ಇದು ಆರ್ಥಿಕತೆ ಆಗುತ್ತಿದೆ.

ಉಪಸಂಹಾರ,

ಒಟ್ಟಾರೆ ಹೇಳುವುದಾದರೆ ಚಂದ್ರಯಾನ ೩ ಮಿಷನ್ ನಿಂದ ಚಂದ್ರನ ಮೇಲ್ಮೈನಲ್ಲಿ ನಡೆಸಿದ ಪ್ರತಿ ಅಧ್ಯಯನ ಅಲ್ಲಿನ ಸಿಗುವ ಮಾಹಿತಿಗಳು ಎಲ್ಲವೂ ಸಹ ಭಾರತಕ್ಕೆ ಹೆಚ್ಚು ಲಾಭದಾಯಕವಾಗಲಿವೆ. ಭಾರತ ವೈಜ್ಞಾನಿಕ ಬಾಯ್ಹಾಕಾಶ ಸಂಶೋಧನ ಕ್ಷೇತ್ರದಲ್ಲಿ ಸಹಿತ ಪ್ರಬಲ ರಾಷ್ಟ್ರವಾಗಿ ಜಾಗತಿಕ ಮನ್ನಣೆ ಪಡೆಯಲಿದೆ. ಭಾರತದ ಪ್ರಜೆಗಳಾದ ನಾವು ಇಂತಹ ಯೋಜನೆಗಳಿಗೆ ಪ್ರೋತ್ಸಾಹ ನೀಡುವ ಮೂಲಕ ವಿಜ್ಞಾನಿಗಳಿಗೆ ಮತ್ತಷ್ಟು ಸ್ಪೂರ್ತಿ ತುಂಬಬೇಕಾಗಿದೆ.

# ಗ್ರಂಥಾಲಯಗಳ ಮಹತ್ವ

ಪೀಠಿಕೆ,

ಗ್ರಂಥಗಳಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ ಎಂಬ ನಾಣ್ಣುಡಿಯಂತೆ ಗ್ರಂಥಗಳನ್ನು ಹೊಂದಿ ಆತ್ಮವನ್ನು ಇಟ್ಟುಕೊಳ್ಳಬೇಕು. ಇಂದಿನ ಯುಗದಲ್ಲಿ ಜ್ಞಾನಾಭಿವೃದ್ಧಿಗೆ ಮತ್ತು ಅಮೂಲ್ಯವಾದ ಸಮಯ ಸದುಪಯೋಗಕ್ಕೆ ಗ್ರಂಥಾಲಯಗಳು ಬಹಳ ಮುಖ್ಯ ಅನಿಸುತ್ತವೆ. ಅದಕ್ಕೇ ಶಾಲಾ ಕಾಲೇಜುಗಳಲ್ಲಿ ಮತ್ತು ಸಾರ್ವಜನಿಕವಾಗಿ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ.

ವಿಷಯ ವಿವರಣೆ,

ಮಾನವನ ಜೀವನದಲ್ಲಿ ಪುಸ್ತಕಗಳು ಪ್ರಮುಖ ಪಾತ್ರ ವಹಿಸುತ್ತವೆ. ಮನುಷ್ಯನ ದೇಹಕ್ಕೆ ಅನ್ನ, ನೀರು, ಗಾಳಿ ಎಷ್ಟು ಮುಖ್ಯವೋ ಹಾಗೆ ಮಾನವನ ಮನಸ್ಸಿನ ವಿಕಾಸಕ್ಕೆ ಪುಸ್ತಕಗಳು ಅವಶ್ಯವಾಗಿರುತ್ತವೆ. ಪುಸ್ತಕಗಳು ಆತ್ಮೀಯ ಮಿತ್ರ ಇದ್ದಂತೆ ಸದಾ ಒಳ್ಳೆಯ ಯೋಚನೆಗಳಿಗೆ ದಾರಿ ಮಾಡಿ ಕೊಡುತ್ತವೆ. ಜ್ಞಾನವಿಕಾಸಕ್ಕಾಗಿಯೇ ಸಾರ್ವಜನಿಕವಾಗಿಯೂ ಮತ್ತು ಶಾಲಾ ಕಾಲೇಜುಗಳಲ್ಲಿ ಗ್ರಂಥಾಲಯ ಗಳನ್ನು ತೆರೆಯಲಾಗಿದೆ. ಇಲ್ಲಿ ಪ್ರತಿಯೊಂದು ವಿಷಯದ ಅಂದರೆ ಸಾಹಿತ್ಯ, ಇತಿಹಾಸ, ಪುರಾಣ, ವಿಜ್ಞಾನ, ತಂತ್ರಜ್ಞಾನ, ಮಕ್ಕಳ ಸಾಹಿತ್ಯ ಮೊದಲಾದ ವಿಷಯಗಳ ಗ್ರಂಥಗಳನ್ನು ಇಟ್ಟಿರುತ್ತಾರೆ. ಗ್ರಂಥಾಲಯಗಳು ಜ್ಞಾನದ ನಿಧಿಗಳಿದ್ದಂತೆ. ಅಂತಹ ಜ್ಞಾನ ನಿಧಿಗೆ ಕೈ ಹಾಕಿ ನಮ್ಮ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಬೇಕು. ಓದುವ ಹವ್ಯಾಸವುಳ್ಳವರು ಗ್ರಂಥಾಲಯಗಳನ್ನು ದೇವಾಲಯದಂತೆ ಕಾಣುತ್ತಾರೆ. ಉನ್ನತ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳಿಗಂತೂ ಜ್ಞಾನ ದಾಸೋಹದ ಮನೆಗಳಿದ್ದಂತೆ. ಅಲ್ಲಿ ಜ್ಞಾನವೆಂಬ ಆಹಾರ ಸೇವಿಸುವವರಿಗೆ ಅದರ ರುಚಿ ಅರಿವಾಗುತ್ತದೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಅಂತರ್ಜಾಲದ ಮೂಲಕ ಜ್ಞಾನವನ್ನು ಗಳಿಸಿಕೊಳ್ಳಬಹುದು, ಅದಕ್ಕೆಂದು ಈ ಲೈಬ್ರರಿಗಳನ್ನು ತೆರೆಯಲಾಗಿದೆ. ಎಲ್ಲ ಪುಸ್ತಕಗಳನ್ನು ಅಂತರ್ಜಾಲಕ್ಕೆ ಸೇರಿಸಲಾಗುತ್ತಿದೆ.

ಉಪಸಂಹಾರ,

ಒಟ್ಟಾರೆಯಾಗಿ ಜೀವನದ ನಿಜವಾದ ಮೌಲ್ಯ ಮತ್ತು ಸಾರ್ಥಕತೆಯನ್ನು ತಿಳಿಸಿ ಕೊಡುವಲ್ಲಿ ಜೀವನದ ಬಗ್ಗೆ ಭರವಸೆಯನ್ನು ತುಂಬುವಲ್ಲಿ ಮತ್ತು ಚಾರಿತ್ರ್ಯವನ್ನು ನಿರ್ವಹಿಸುವಲ್ಲಿ ಪುಸ್ತಕಗಳ ಪಾತ್ರ ಹಿರಿದು. ಇಂತಹ ಪುಸ್ತಕಗಳನ್ನು ಒಳಗೊಂಡ ಗ್ರಂಥಾಲಯದ ಸದ್ಬಳಕೆಯಿಂದ ಸ್ವಯಂ ವ್ಯಕ್ತಿತ್ವ ವಿಕಾಸ ಹಾಗೂ ಶೈಕ್ಷಣಿಕ ಪ್ರಕ್ರಿಯೆಗಳ ಉತ್ತಮ ನಿರ್ವಹಣೆ ಸಾಧ್ಯವಾಗುತ್ತದೆ. ಆದ್ದರಿಂದ ಗ್ರಂಥಾಲಯಗಳನ್ನು ಅಭಿವೃದ್ಧಿಪಡಿಸಿ, ಕಾಲ ಕಾಲಕ್ಕೆ ಅದನ್ನು ವಾಸ್ತವಿಕ ನೆಲಗಟ್ಟಿಗೆ ತಕ್ಕಂತೆ ವಿಸ್ತೃತಗೊಳಿಸುವುದು ನಮ್ಮ ಕರ್ತವ್ಯವಾಗಬೇಕು.

**ಪಠ್ಯದಲ್ಲಿರುವ ಪ್ರಬಂಧದ ವಿಷಯಗಳು**

- ರಾಷ್ಟ್ರೀಯ ಹಬ್ಬಗಳ ಮಹತ್ವ
- ಸಾಮಾಜಿಕ ಪಿಡುಗುಗಳು
- ಸ್ವಚ್ಛ ಭಾರತ ಅಭಿಯಾನ
- ಪ್ರಾಚ್ಯ ಸ್ಮಾರಕಗಳ ಸಂರಂಕ್ಷಣೆ
- ರಾಷ್ಟ್ರೀಯ ಭಾವೈಕ್ಯ
- ಗ್ರಾಮ ಸ್ವರಾಜ್ಯ
- ತ್ಯಾಜ್ಯ ವಸ್ತು ನಿರ್ವಹಣೆ
- ಮಹಿಳಾ ಸಬಲೀಕರಣ
- ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ